
ಹೊಸ್ತೋಟ ಮಂಜುನಾಥ ಭಾಗವತ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಡಾ. ವಿಜಯ ನಳಿನಿ ರಮೇಶ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೩೨

ಹೊಸ್ತೋಟ ಮಂಜುನಾಥ ಭಾಗವತ

ವ್ಯಕ್ತಿ ಪರಿಚಯ

ಡಾ॥ ವಿಜಯ ನಳಿನಿ ರಮೇಶ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

HOSTHOTA MANJUNATHA BHAGAVATHA-
A pen portrait - by Dr. VIJAYA NALINI RAMESHA.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033
Pages : 32 Price : Rs. 10 2009.

ಪ್ರಥಮ ಮುದ್ರಣ	೨೦೦೯
ಪ್ರತಿಗಳು	೨೦೦೦
ಪುಟಗಳು	೩೨
ಬೆಲೆ	ರೂ.೧೦ (ಹತ್ತು ರೂಪಾಯಿ)

ಮುದ್ರಕರು
ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ|| ವಿಜಯ ನಳಿನಿ ರಮೇಶ ಅವರು ಹೊಸ್ತೋಟ ಮಂಜುನಾಥ ಭಾಗವತರ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧೫-೦೮-೨೦೦೯

ಮೊದಲ ಮಾತು

ನಮ್ಮ ಮಣ್ಣಿನಲ್ಲಿಯೇ ಹುಟ್ಟಿ ಬೆಳೆದ ಕಲೆಗಳು, ನಮ್ಮ ಜನಪದ ಸಂಸ್ಕೃತಿ, ಪರಂಪರೆ ಇವೆಲ್ಲ ತಮ್ಮ ವಿಶಿಷ್ಟ ಅಂಶಗಳೊಂದಿಗೆ ಉಳಿದರೆ, ಬೆಳೆದರೆ ಮಾತ್ರ ಸಮಾಜ ಸಶಕ್ತವಾಗಿ ಉಳಿಯುತ್ತದೆ, ಬೆಳೆಯುತ್ತದೆ, ಬಾಳುತ್ತದೆ. ಅನ್ಯ ಸಂಸ್ಕೃತಿಗಳ ಅನಿಷ್ಟ ಅಂಶಗಳ ಧಾಳಿಯಿಂದ, ಏಕರೂಪ ಸಂಸ್ಕೃತಿಯ ಅಪಾಯದಿಂದ ತಪ್ಪಿಸಿಕೊಳ್ಳಲು ಸಮರ್ಥವಾಗುತ್ತದೆ. ಜನಪದ ಕಲಾವಿದರು, ಕಲಾ ಗುರುಗಳು, ಸಂಗ್ರಾಹಕರು, ವಿದ್ವಾಂಸರು ಮುಂತಾದವರ ಕುರಿತಾದ ಪರಿಚಯವನ್ನು ಹೊಸ ಪೀಳಿಗೆಗೆ ಮಾಡಿಕೊಡುವುದು ಅತೀ ಅಗತ್ಯವಾದ ಕಾರ್ಯವಾಗಿದೆ.

ಈ ಕಾರ್ಯವನ್ನು ಕೈಗೊಂಡು ನನಗೆ ಹೊಸ್ತೋಟ ಮಂಜುನಾಥ ಭಾಗವತರನ್ನು ಕುರಿತು ಬರೆಯಲು ಅವಕಾಶ ನೀಡಿರುವ ಕರ್ನಾಟಕ ಜಾನಪದ ಪರಿಷತ್ತಿಗೆ ನಾನು ಆಭಾರಿಯಾಗಿದ್ದೇನೆ. ನನಗೆ ಈ ಕುರಿತು ತಿಳಿಸಿದ ಶ್ರೀಮತಿ ಶಾಂತಿ ನಾಯ್ಕ ಅವರಿಗೆ ವಂದನೆಗಳು. ಮಾಹಿತಿ ನೀಡಿದ ಶ್ರೀ ಹೊಸ್ತೋಟ ಭಾಗವತರಿಗೆ, ಶ್ರೀ ನಾಗರಾಜ ಜೋಶಿ, ಸೋಂದಾ, ಡಾ. ರಾಮಕೃಷ್ಣ ಜೋಶಿ, ಮೈಸೂರು ಇವರಿಗೆಲ್ಲ ಧನ್ಯವಾದಗಳು.

ಡಾ॥ ವಿಜಯ ನಳಿನಿ ರಮೇಶ

ಹೊಸ್ತೋಟ ಮಂಜುನಾಥ ಭಾಗವತ

ಬದುಕಿಗಾಗಿ ಯಕ್ಷಗಾನವನ್ನೇ ಆಧರಿಸಿದವರು ಅನೇಕ ಜನ. ಆದರೆ ಯಕ್ಷಗಾನಕ್ಕಾಗಿಯೇ ತನ್ನ ಬದುಕನ್ನು ಮುಡಿಪಾಗಿಟ್ಟವರು, ಅದರಲ್ಲಿಯೇ ತನ್ನ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡವರು ಹೊಸ್ತೋಟ ಮಂಜುನಾಥ ಭಾಗವತರು. ಅವರ ಚಿಂತನೆ, ವಿಚಾರ, ಕಲ್ಪನೆ–ಭಾವನೆಗಳೆಲ್ಲ ಯಕ್ಷಗಾನ ಕ್ಷೇತ್ರ, ಸೂತ್ರ, ಪ್ರಸಂಗ–ಪ್ರದರ್ಶನಗಳ ಕುರಿತಾಗಿಯೇ. ಅವರ ತಿರುಗಾಟ, ಓಡಾಟಗಳೆಲ್ಲ ಈ ಕಲೆಯ ಅಂತರಂಗದ ದರ್ಶನಕ್ಕಾಗಿ, ಸೂತ್ರಾನ್ವಯ ಕಲಿಕೆಗಾಗಿ. ಅವರ ಊಟ, ವಸತಿಗಳೆಲ್ಲ ಯಕ್ಷಗಾನ ಶಿಷ್ಯರ, ಅಭಿಮಾನಿಗಳ, ಕಲಾಸಕ್ತರ ಮನೆಗಳಲ್ಲಿ. ಸರ್ವಸಂಗ ಪರಿತ್ಯಾಗಿ, ಪರಿವ್ರಾಜಕಾಚಾರ್ಯ ಮುಂತಾದ ಪದಗಳು ಅವರಿಗೆ ಯಥಾರ್ಥವಾಗಿ ಹೊಂದಿಕೊಳ್ಳುತ್ತವೆ. ಇವರೊಂದು "ಸಂಚಾರಿ ಯಕ್ಷಗಾನ ವಿಶ್ವವಿದ್ಯಾಲಯ" ಎಂಬ ಮಾತು ಅತಿಶಯೋಕ್ತಿಯಲ್ಲ.

ಇವರು ಶಿರಸಿ ತಾಲೂಕಿನ ಹೊಸ್ತೋಟದಲ್ಲಿ 1938ರಲ್ಲಿ ಜನಿಸಿದರು. ಇಬ್ಬರು ತಮ್ಮಂದಿರು, ಅಕ್ಕ ಹಾಗೂ ತಂಗಿಯರ ನಡುವೆ ತಾಯಿ ಮಹಾದೇವಿಯ ಬಡತನದ ಲಾಲನೆಯಲ್ಲಿಯೇ ಶೈಶವದಿಂದ ಬಾಲ್ಯವನ್ನು ಪ್ರವೇಶಿಸಿದರು. ತಂದೆ ಗಣಪತಿ ಹೆಗಡೆ ಇವರ ಬಾಲ್ಯದಲ್ಲಿಯೇ ಮನೆಬಿಟ್ಟು ಹೋಗಿದ್ದರಿಂದ ಕುಟುಂಬಕ್ಕೆ ಬಡತನ ಅನಿವಾರ್ಯವಾಗಿತ್ತು. ಆದರೆ ಯಕ್ಷಗಾನದ ಪರಿಸರ ಇವರಿಗೆ ಸಮೃದ್ಧವಾಗಿ ಒದಗಿ ಬಂದಿತ್ತು. ಉತ್ತರಕನ್ನಡ ಹಾಗೂ ದಕ್ಷಿಣಕನ್ನಡದ ಮೇಳಗಳ ಆಟ ಅಲ್ಲಿ ನಡೆಯುತ್ತಿತ್ತು. ಕೆರೆಮನೆ ಶಿವರಾಮ ಹೆಗಡೆಯವರ ಮೇಳದ ಕನಿಷ್ಠ ನಲವತ್ತು ಆಟಗಳು ಆ ಪ್ರದೇಶದಲ್ಲಿ ನಡೆಯುತ್ತಿದ್ದವು. ಬಾಲಕ ಮಂಜುನಾಥನಿಗೆ ಶಿವರಾಮ ಹೆಗಡೆಯವರಲ್ಲಿ ಒಂದು ಬಗೆಯ ಆರಾಧನಾ ಭಾವವೇ ಬೆಳೆದುಬಿಟ್ಟಿತ್ತು. ಕಲಾವಿದರೊಂದಿಗೆ ಒಡನಾಟ, ಯಕ್ಷಗಾನಾಸಕ್ತ ಗೆಳೆಯರೊಂದಿಗೆ ಯಕ್ಷಗಾನದ ಆಟ, ಚಂಡೆ, ಮದ್ದಳೆಗಳ

ಮೇಲೆ ಕೈಯಾಡಿಸುವ ಹವ್ಯಾಸ, ಚಿಕ್ಕಂದಿನಲ್ಲೇ ರಂಗದ ಮೇಲೆ ಕೃಷ್ಣನ ವೇಷ ಹೀಗೆ ಅವರೊಳಗೊಬ್ಬ ಯಕ್ಷಗಾನದ ಸರ್ವ ಅಂಗಗಳ ಆಸಕ್ತ ತಾನಾಗಿ ಬೆಳೆಯುತ್ತಿದ್ದ. ಸನಿಹದ ಗೋಳಿ ಶಾಲೆಯಲ್ಲಿ ನಾಲ್ಕನೇಯ ಇಯತ್ತೆಯ ತನಕ ಕಲಿತ ಮಂಜುನಾಥನಿಗೆ ಶಾಲೆಯ ಮುಂದಿನ ಹಾದಿ ದುರ್ಗಮವಷ್ಟೇ ಅಲ್ಲ ದುಃಸಾಧ್ಯವೇ ಆಗಿತ್ತು. ಹೊಟ್ಟೆ ಪಾಡಿಗಾಗಿ ತೋಟ-ಗದ್ದೆಗಳಲ್ಲಿ ಕೂಲಿ-ನಾಲಿ ಮಾಡಿದನು. ಯಕ್ಷಗಾನದ ಆಸಕ್ತಿಯೊಂದಿಗೆ ಅರಿವಿನ ಬೆಳಕಿನತ್ತ ಮುಖಮಾಡ ತೊಡಗಿದ ಬಾಲಕನಿಗೆ ವಿದ್ಯೆಯ ಹಾದಿ ತನ್ನ ಪಾಲಿಗೆ ಮುಗಿದು ಹೋಗಿದೆಯೆಂಬ ಅರಿವಾದಾಗ ಬದುಕು ಶೂನ್ಯವಾದಂತೆನಿಸಿ ಹೊಳೆಗೆ ಹಾರಿ ಅಳಿದು ಹೋಗಲು ಯತ್ನಿಸಿದ್ದುಂಟು. ನಿರಾಶೆಯ ಕತ್ತಲಿನಲ್ಲೂ ಭರವಸೆಯ ಬೆಳಕು ಮೂಡುವ ಹಾಗೆ ದನಕಾಯುವ ಹುಡುಗನೊಬ್ಬನ ನಿಶ್ಚಿಂತ ಮನೋಭಾವ. ಜೀವನೋತ್ಸಾಹಗಳ ದರ್ಶನದಿಂದ ಮತ್ತೆ ಬದುಕುವ ಛಲ ಬಲವಾಯಿತು. ಆದರೆ ಲೌಕಿಕದ ಬದುಕು ಬೇಡವೆಂದು ಮೊದಲೇ ಅನಿಸಿದ್ದರಿಂದ ಕಾರವಾರದ ರಾಮಕೃಷ್ಣಾಶ್ರಮದ ಹಾದಿ ಹಿಡಿದರು. ಅಲ್ಲಿ ಅಭಯ ಚೈತನ್ಯರೆಂಬ ಅಭಿಧಾನದಲ್ಲಿ ಸನ್ಯಾಸ ದೀಕ್ಷೆ ಪಡೆದರು. ಆದರೆ ಅಲ್ಲಿ ಗುರುಗಳ ಉಪದೇಶ ಹಿಡಿಸಿದರೂ ಆಶ್ರಮದ ವಾತಾವರಣ ಇಷ್ಟವಾಗದ ಕಾರಣ ಮರಳಿ ಊರ ಕಡೆ ಮುಖಮಾಡಿದರು. ಬೇರೆ ಯಾವುದೇ ಆಶ್ರಮ, ಸಂಸ್ಥೆಗಳು ಮುಂತಾದವುಗಳ ಧೋರಣೆ ಹೊಂದಿಕೆಯಾಗದಿದ್ದಾಗ ತಮ್ಮದೇ ಚಿಂತನ-ಮಂಥನ, ವಿಚಾರ ಅನುಭವಗಳ ಹಿನ್ನಲೆಯಲ್ಲಿ ಬದುಕಿನ ಅತ್ಯಂತ ಮಹತ್ವದ ನಿರ್ಧಾರ ಹಾಗೂ ಸಂಕಲ್ಪಗಳನ್ನು ಕೈಕೊಂಡರು. "ಆಧ್ಯಾತ್ಮಿಕ ಎನ್ನುವುದು ಒಂದು ಮನೋಭಾವ. ಎಲ್ಲೋ ಇದ್ದು ಕಲಿಯುವ ಪಾಠ ಆದಲ್ಲ ಅಳವಡಿಸಿಕೊಳ್ಳುವ ಸೂತ್ರ" ಎಂಬುದು ಅವರಿಗೆ ಮನವರಿಕೆಯಾಯಿತು. ಸನ್ಯಾಸ ದೀಕ್ಷೆಯನ್ನು ಅವರು ರಾಮಕೃಷ್ಣ ಆಶ್ರಮದಲ್ಲಿ ಪಡೆದರೂ ಸನ್ಯಾಸಿಯ ಮನೋವೃತ್ತಿ ಪ್ರಾಯಶಃ ಅವರಿಗೆ ಜನ್ಮಜಾತವಾಗಿತ್ತು. ಅಂತೆಯೇ ಸನ್ಯಾಸಿಯ ವಸ್ತ್ರ, ಭೂಷಣಗಳನ್ನು ತೊರೆದು ತಿರುಗಿ ಸಮಾಜವನ್ನು ಪ್ರವೇಶಿಸಿದರೂ ಅವರು ಅಂತರಂಗದಲ್ಲಿ ಪೂರ್ಣ ಸಂತನೇ ಆಗಿರಲೂ ಸಂಕಲ್ಪಿಸಿದರು. ಸತ್ಯ, ಅಹಿಂಸೆ, ಅಪರಿಗ್ರಹ, ಅಸ್ತೇಯ, ಬ್ರಹ್ಮಚರ್ಯಗಳನ್ನು ಬದುಕಿನಾದ್ಯಂತ ಪಾಲಿಸಿಕೊಂಡು ಬಂದಿದ್ದಾರೆ. ಬಹಿರಂಗ ಬದುಕನ್ನು ಯಕ್ಷಗಾನಕ್ಕೆ

ಮುಡಿಪಾಗಿಟ್ಟು, ಪ್ರತಿಫಲಾಪೇಕ್ಷೆಯಿಲ್ಲದೇ ಆಸಕ್ತರಿಗೆ ಕಲಿಸುವ, ಆ ಕಲೆಗಾಗಿ ದುಡಿಯುವ, ತನ್ಮೂಲಕ ಸಮಾಜದ ಋಣ ಸಲ್ಲಿಸುವ ಸಂಕಲ್ಪ ಅನುಷ್ಠಾನಗೊಳಿಸಿದ್ದಾರೆ. 'ಸಮಾಜದ ಮಧ್ಯದಲ್ಲಿರಬೇಕು. ಸಮಾಜವನ್ನು ಅವಲಂಬಿಸಲೂಬಾರದು, ಸಮಾಜವನ್ನು ವಿರೋಧಿಲೂಬಾರದು, ಹೊಂದಿಕೊಂಡು ಬದುಕಬೇಕು' ಎಂಬುದು ಅವರ ಜೀವನಸೂತ್ರ.

ಚಿಕ್ಕಂದಿನಿಂದಲೇ ಯಕ್ಷಗಾನದ ವಾತಾವರಣದಲ್ಲಿ ಕುಣಿತ, ಹಾಡುಗಾರಿಕೆ, ಅಭಿನಯಗಳ ಅನುಭವ ಮಂಜುನಾಥ ಭಾಗವತರಿಗೆ ಆಗಿತ್ತಾದರೂ ಪ್ರತಿ ವಿಭಾಗದ ಆದ್ಯಂತವನ್ನು ಅರಿಯುವುದಕ್ಕೆ ಅವು ಸಿಗುತ್ತಿರಲಿಲ್ಲ. ಹಾಗಾಗಿ ಯಕ್ಷಗಾನದ ಪ್ರತಿ ಅಂಗದ ಒಳ ಹೊಕ್ಕು ನೋಡಿ ಶೋಧಿಸುವ ಒಂದು ಗೀಳು ಅವರ ತಲೆ ಹೊಕ್ಕಿತು. ಇದಕ್ಕಾಗಿ ಯಕ್ಷಗಾನದ ಹಳೆಯ ಪದ್ಧತಿ, ಕ್ರಮಗಳನ್ನು ಶೋಧಿಸಲು ಹೊರಟರು. ಯಲ್ಲಾಪುರ ತಾಲೂಕಿನ ಮೂಲೆ ಮೂಲೆಯ ಹಳ್ಳಿಗಳು, ಸಿದ್ಧಾಪುರದಿಂದ ಹಳಿಯಾಳಸುಪಾವರೆಗಿನ ಘಟ್ಟದ ಮೇಲಿನ ಪ್ರದೇಶದ ಒಳ ಹಳ್ಳಿಗಳು ಮುಂತಾಗಿ ಎಲ್ಲ ಕಡೆ ತಿರುಗಿದರು. ಆ ಕಾಲದಲ್ಲಿ ಘಟ್ಟದಮೇಲಿನ ಭಾಗದಲ್ಲೆಲ್ಲ ಬಳಕೆಯಲ್ಲಿದ್ದುದು ಕರ್ಕಿ ಪದ್ಧತಿ. ಅದನ್ನು ಸಭಾಹಿತ ಪದ್ಧತಿ ಎಂದು ಕರೆಯುತ್ತಿದ್ದರು. (ಸಭಾಹಿತ ಮನೆತನದ ವಿಷ್ಣು ಸಭಾಹಿತರೆಂಬ ಭಾಗವತರು ತಮ್ಮ ಶಿಷ್ಯರಿಗೆ ಕಲಿಸುವ, ಅವರಿಗೆ ಬೇಕಾದ ಪ್ರಸಂಗಗಳನ್ನು ಪ್ರತಿ ಮಾಡಿಕೊಳ್ಳಲು ಕೊಡುವ ಕೆಲಸ ಮಾಡುತ್ತಿದ್ದರು). ಅವರಿಂದ ಬಂದ ಕ್ರಮವನ್ನೇ ಕರ್ಕಿ ಹಾಸ್ಯಗಾರ ಮನೆತನದವರು ಯಕ್ಷಗಾನದಲ್ಲಿ ಬಳಸುತ್ತಿದ್ದ ಕಾರಣ ಅದನ್ನು 'ಸಭಾಹಿತ ಮಟ್ಟು' ಎಂದು ಕರೆಯಲಾಗುತ್ತಿತ್ತು. ಸಾಗರ–ಹೊಸನಗರ ಕಡೆಯಲ್ಲಿ ವೀರಭದ್ರ ನಾಯ್ಕರಲ್ಲಿ ಕಲಿತವರು ಕೆಲವರಿದ್ದರು. ಬೆಳೆಯೂರು, ಬಚ್ಚಗಾರು ಮುಂತಾದ ಕಡೆಗಳಲ್ಲೂ ಹಲವರನ್ನು ಸಂದರ್ಶಿಸಿದರು. ಯಕ್ಷಗಾನ ಕುರಿತಾದ ಹಳೆಯ ಸಂಗತಿಗಳ ಸಂಗ್ರಹದ ಕುರಿತಾದ ಈ ತಿರುಗಾಟದಲ್ಲಿ ಹಳೆಯ ತಾಡ ಓಲೆಯಲ್ಲಿನ ಕೆಲವು ಪ್ರಸಂಗಗಳು ದೊರೆತವು. ಈ ತಿರುಗಾಟದಲ್ಲಿ ಅವರು ಕಂಡುಕೊಂಡಂತೆ ಪದ್ಯದ ಮಟ್ಟುಗಳನ್ನು ಬಳಸುವಲ್ಲಿ ಎಲ್ಲರೂ ಏಕ ಸೂತ್ರತೆಯನ್ನು ಅನುಸರಿಸುತ್ತಿದ್ದರು. ಲಯಕ್ಕೆ ಸಂಬಂಧಿಸಿ ಉತ್ತರಕನ್ನಡದಲ್ಲಿ ವಿಲಂಬಿತಗತಿ, ಸಾಗರದ ಕಡೆ

ಚುರುಕಾದ ಲಯ ರೂಢಿಯಲ್ಲಿತ್ತು. ರಂಗರೂಢಿಗಳು, ಪ್ರಾದೇಶಿಕ ಬಳಕೆಗಳು, ಪ್ರದರ್ಶನ ತಂತ್ರಗಳು, ಪದ್ಯದ ಮಟ್ಟುಗಳ ಕುರಿತಾದ ಗಮನ ವೇಷಭೂಷಣಗಳ ಅಳವಡಿಕೆ ಇವೆಲ್ಲ ಪರಂಪರಾಗತ ನಂಬಿಕೆಯಲ್ಲಿಯೇ ಸಾಗುತ್ತಿದ್ದ ಅಂಶ ಸ್ಪಷ್ಟವಾಗಿತ್ತು. ಕಲಿಯುವಿಕೆ, ಕಲಿಸುವಿಕೆಗಳಿಗೆ ನಿರ್ದಿಷ್ಟ ಕೇಂದ್ರಗಳಿಲ್ಲದಿದ್ದರೂ ಅನುಭವಿಗಳ ಶಿಷ್ಯವೃತ್ತಿ, ಒಡನಾಟ ಆಯಾ ಪ್ರದೇಶದ ಅಭ್ಯಾಸಿಗಳಿಗೆ ಆಧಾರವಾಗಿತ್ತು. ಕಲಿಯಲು ಅನುಕೂಲವಾಗುವಂತಹ ಸಾಮಾನ್ಯ ಸೂತ್ರಗಳನ್ನು ರೂಪಿಸುವ ಬಗ್ಗೆ ಪ್ರಯತ್ನಗಳು ನಡೆಯತೊಡಗಿದ್ದವು. ಅಂದಿನ ಆ ಪರಿಸರದ ಪ್ರಭಾವದಲ್ಲಿ ಯಕ್ಷಗಾನದ ವೈಯಕ್ತಿಕ, ಪ್ರಾದೇಶಿಕಲ್ಪನೆಗಳಿಂದ ಭಿನ್ನವಾಗಿ, ವಾಸ್ತವಿಕ ಅಂಶಗಳನ್ನು ಗ್ರಹಿಸಿ ಬಳಸುವ ಬಗ್ಗೆ ಭಾಷೆಯನ್ನು ವ್ಯಾಕಕರಣದ ಚೌಕಟ್ಟಿಗೆ ಒಳಪಡಿಸುವಂತೆ ಸರ್ವ ಸಾಮಾನ್ಯ ಸೂತ್ರಗಳಿಗೆ ಒಳಪಡಿಸಲು ಯಾಕೆ ಪ್ರಯತ್ನಿಸಬಾರದು? ಎಂದು ಮಂಜುನಾಥ ಭಾಗವತರು ಯೋಚಿಸತೊಡಗಿದರು.

ಹೊಸ್ತೋಟ ಭಾಗವತರ ರೀತಿಯಲ್ಲಿಯೇ ಯೋಚಿಸುವ ಯಕ್ಷಗಾನದ ರಾಗ, ತಾಳಗಳ ಕುರಿತು ಹೊಸ ಹೊಸ ಆವಿಷ್ಕಾರಕ್ಕೆ ಪ್ರಯತ್ನಿಸುತ್ತಿದ್ದ ಯಲ್ಲಾಪುರ ತಾಲೂಕಿನ ಬಾಳೆಹದ್ದ ಕೃಷ್ಣ ಭಾಗವತರೂ ಕೆರೆಮನೆ ಮಹಾಬಲ ಹೆಗಡೆಯವರೂ (ಯಕ್ಷಗಾನ ಕಲಾವಿದ) ಇವರ ವಿಚಾರಗಳಿಗೆ ಬೆಂಬಲವಿತ್ತರು. ಭಾಗವತರು ಶಾಸ್ತ್ರೀಯ ಸಂಗೀತ, ನೃತ್ಯಗಳನ್ನು ಅವಲೋಕಿಸುತ್ತಾ ಯಕ್ಷಗಾನ ಕ್ರಮಗಳನ್ನು ನಿರೀಕ್ಷಿಸಿದಾಗ ಅವರಿಗೆ ಹೀಗನ್ನಿಸಿತು: "ಯಕ್ಷಗಾನಕ್ಕೆ ಅದರದ್ದೇ ಆದ ಪ್ರತ್ಯೇಕ ಶೈಲಿಯಿದೆ. ಬಯಲಾಟದಲ್ಲೆಲ್ಲ ಜಾನಪದ ಗುಣವಿದೆ. ಈ ಜಾನಪದ ಲಕ್ಷಣಗಳಿಗೆ ಶಾಸ್ತ್ರ ರೂಪಿಸಲಾಗದೆ ಇದ್ದರೂ ಸೂತ್ರರೂಪಿಸಬಹುದು"

ಲಯಸಾಕ್ಷಾತ್ಕಾರ :- ಇದೇ ನಿಟ್ಟಿನಲ್ಲಿ ಅವರು ಹಗಲಿರುಳೂ ಚಿಂತಿಸುತ್ತಾ ಮುಂದುವರೆದರು. ಮಕ್ಕಳು ಬಾಯಿಪಾಠ ಹೇಳುವಾಗ "ಒಂದೊಂದಲೆ ಒಂದಾ... ಒಂದೆರಡಲೆ ಎರಡಾ..." ಎಂದು ಒಂದು ಸಮಯದಲ್ಲಿ ಹೇಳುವ ಕ್ರಮವನ್ನು ಗಮನಿಸಿದರು. ಯಕ್ಷಗಾನ ಕುಣಿತವೆಂದರೆ ಅದು ಜಾನಪದದಲ್ಲಿ ಒಂದು ಬೀಸುಲಯ ಜೋಕಾಲಿಯ ಲಯದಂತೆ. ಒಂದೊಂದಲೆ ಒಂದಾ....."

ಎನ್ನುವ ಒಂದು ಆವರ್ತದ ಅವಧಿಯಲ್ಲಿ ಒಮ್ಮೆ ಒಂದು, ಇನ್ನೊಮ್ಮೆ ಎರಡು, ಮತ್ತೊಮ್ಮೆ ನಾಲ್ಕು, ಮಗದೊಮ್ಮೆ ಎಂಟು ಹೀಗೆ ಗಣಿಸಿದಾಗ ಅವರಿಗೆ ನಾಲ್ಕು ಬಗೆಯ ಲಯ ಗಣಿತಸಿಕ್ಕಿತು. ಮೊದಲನೆಯದು ವಿಲಂಬಿತ ಲಯವಾಗಿ, ಎರಡನೆಯದು ಮಧ್ಯಲಯವಾಗಿ, ಮೂರನೆಯದು ತ್ವರಿತ ಲಯವಾಗಿ, ನಾಲ್ಕನೆಯದು ತೀವ್ರ ಲಯವಾಗಿ ಗಣನೆಗೆ ಸಿಕ್ಕಿತು. ಈ ಗಣಿತ ಕ್ರಮವನ್ನೆ ನಾಲ್ಕು ಲಯಕ್ಕೆ ಆಧಾರವಾಗಿಟ್ಟುಕೊಂಡು ಇದೇ ಕ್ರಮದಲ್ಲಿ ತಾಳಗಣನೆಯನ್ನೂ ಆರಂಭಿಸಿದರು. ಭಾಗವತರ ಈ ಲಯ ಸಾಕ್ಷಾತ್ಕಾರಕ್ಕೆ ಬಾಳೆಹದ್ದು ಭಾಗವತರ ಅನುಮೋದನೆ ಹಾಗೂ ಮಹಾಬಲ ಹೆಗಡೆಯವರ ಪ್ರೋತ್ಸಾಹ ನಿರಂತರವಾಗಿತ್ತು. ತಾಳಗಳಿಗೆ ಕರ್ನಾಟಕ ಸಂಗೀತದ ಪ್ರಭಾವ ಹೆಚ್ಚಾಗಿರುವುದು ಇವರ ಗಮನಕ್ಕೆ ಬಂದಿತ್ತು. ಲಯ ಲೆಕ್ಕಾಚಾರದ ಗಣಿತದ ಕ್ರಮವನ್ನೇ ಇಟ್ಟುಕೊಂಡು ಯಕ್ಷಗಾನದಲ್ಲಿರುವ ಏಳು ತಾಳಗಳನ್ನು ನಿರ್ದಿಷ್ಟಪಡಿಸಿಕೊಂಡರು. ಮಾತ್ರವಲ್ಲ, ಯಕ್ಷಗಾನದಲ್ಲಿ ವಿಶಿಷ್ಟವೂ ವಾದದ ವಸ್ತುವೂ ಆಗಿದ್ದ ಕೋರೆ ತಾಳ ಹಾಗೂ ಹಾರಿಕೆ ತಾಳಗಳ ಕುರಿತೂ ಸಹ ಚಿಂತನೆ ನಡೆಸಿದರು. ಇವು ಜನಪದ ತಾಳಗಳಾಗಿದ್ದು ಇವಕ್ಕೆ ಲೆಕ್ಕಾಚಾರದ ನಿಯಮವನ್ನು ಬಿಟ್ಟು ಜನಪದ ಘಾತಗಳ ನೆರವಿನಿಂದ ಇವೆರಡನ್ನೂ ನಿರ್ದಿಷ್ಟಪಡಿಸಿದರು. ಇದೇ ರೀತಿ ರಂಗದ ಮೇಲಿನ ಕುಣಿತಗಳ ಕುರಿತು ಸಹ ಚಿಂತನೆ ಮುಂದುವರಿಯಿತು. ಯಕ್ಷಗಾನ ಕುಣಿತಗಳೆಲ್ಲ ಘಾತಾನುಸರಣೆಯಿತ್ತೇ ವಿನಹ ತಾಳಾಕ್ಷರಗಳ ನುಡಿಸುವಿಕೆಯಿರಲಿಲ್ಲ. ಸ್ವಂತದ ಪ್ರೇರಣೆಯಿಂದ ತಾಳಾನುಸರಣೆಯಲ್ಲಿ ಕುಣಿಯುವ ಕ್ರಮವನ್ನು ರೂಪಿಸಿದರು.

ಹೀಗೆ ಲಯ, ತಾಳ, ಕುಣಿತಗಳಿಗೆ ನಿರ್ದಿಷ್ಟ ಸೂತ್ರಗಳನ್ನು ರೂಪಿಸಿ "ಸ್ವಂತಂತ್ರವಾಗಿ ಅಭ್ಯಾಸಮಾಡಿ ಆತ್ಮ ವಿಶ್ವಾಸ ಬೆಳೆಸಕೊಳ್ಳಲು ಸೂತ್ರ ಒಂದು ಸಾಧನವಾಗುತ್ತದೆ" ಎಂಬುದನ್ನು ಕಂಡುಕೊಂಡರು. ಈ ಕ್ರಮವನ್ನು ಬಡಗುತಿಟ್ಟಿನ ಪ್ರಸಿದ್ಧ ಭಾಗವತರಾದ ಶ್ರೀ ಉಪ್ಪೂರು ನಾರಾಯಣ ಭಾಗವತರು, ದಕ್ಷಿಣ ಕನ್ನಡದ ಕೆಲವು ಭಾಗವತರುಗಳು, ಕೆರೆಮನೆ ಮಹಾಬಲ ಹೆಗಡೆಯವರು ಮುಂತಾದವರೆಲ್ಲ ಅನುಮೋದಿಸಿದರು. ನಂತರ ಈ 'ತಾಳಲಯ ಸೂತ್ರ'ವನ್ನು ಬರೆದುಕೊಟ್ಟಾಗ ಇವರ ಅಭಿಮಾನಿಗಳು ಅದನ್ನು ಅಚ್ಚುಹಾಕಿಸಿ "ಅಭ್ಯಾಸವೇ ಇದರ ಬೆಲೆ"ಯೆಂದು ಮುದ್ರಿಸಿ ವಿತರಿಸಿದರು.

ಭಾಗವತರು ಯಕ್ಷಗಾನವನ್ನು ಆಮೂಲಾಗ್ರವಾಗಿ ಶೋಧಿಸ ಹೊರಟ್ಟಿದ್ದು ಆ ಕಲೆಯನ್ನು ಪೂರ್ಣವಾಗಿ ತಿಳಿದುಕೊಳ್ಳುವುದಕ್ಕಾಗಿ ಹಾಗೂ ಅದನ್ನು ವಸ್ತು ನಿಷ್ಠವಾಗಿ ಅರ್ಥ ಮಾಡಿಕೊಳ್ಳುವುದಕ್ಕಾಗಿ. ಈ ಕಲೆಯ ಕುರಿತು ವಿಶೇಷವಾದ ಆಸಕ್ತಿ ಮೂಡಲು ಕಾರಣರಾದ ಶ್ರೀ ಶಿವರಾಮ ಹೆಗಡೆ (ಕೆರೆಮನೆ) ಯವರೇ ಇವರಿಗೆ "ಯಕ್ಷಗಾನವನ್ನು ವಸ್ತುನಿಷ್ಠವಾಗಿ ನೋಡುವುದನ್ನು ಕಲಿ, ವ್ಯಕ್ತಿ ನಿಷ್ಠೆ ವ್ಯಕ್ತಿ ಪೂಜೆ ಬೇಡ" ಎಂದು ಉಪದೇಶಿಸಿದ್ದರು.

ಭಾಗವತರ ಎಲ್ಲ ಮಡುಕುಪಿಕೆಯ ಹಿಂದೆ ಯಕ್ಷಗಾನದ ಪ್ರಾದೇಶಿಕ ಭೇದಗಳನ್ನು ಇಲ್ಲವಾಗಿಸುವ ಮಹದಾಶೆಯಿದೆ. ಈ ಪ್ರಾದೇಶಿಕ ಭೇದಗಳು ಅನವಶ್ಯಕ ಸ್ಪರ್ಧೆಗೆ, ಮೇಲಾಟಕ್ಕೆ ಎಡೆ ಮಾಡಿಕೊಡುತ್ತವೆ. ಎಂಬುದು ಅವರ ಅಭಿಪ್ರಾಯ.

ಈ ನಡುವೆ ಹಲವಾರು ಜನ ಪ್ರಸಂಗ ಕರ್ತರು ಯಕ್ಷಗಾನದ ಹಳೆಯ ಅನುಭವಿಗಳು ಮುಂತಾದವರೊಂದಿಗೆ ಚರ್ಚೆ ವಿಚಾರವಿನಿಮಯಗಳನ್ನು ನಡೆಸಿದರು. ನಾ.ನಾ. ಜೋಶಿ, ಬಾಳಗಾರ ವೆಂಕಟರಮಣ ಹೆಗಡೆ ಮುಂತಾದವರೊಂದಿಗಿನ ಚರ್ಚೆ ಸಂವಾದಗಳ ಪರಿಣಾಮವಾಗಿ ಪ್ರಸಂಗ ಪದ್ಯಗಳ ರಚನೆಯ ಕುರಿತು ಆಳವಾಗಿ ಅಭ್ಯಾಸ ಮಾಡಬೇಕೆಂಬ ತೀವ್ರ ಇಚ್ಛೆ ಹುಟ್ಟಿತು.

ಕೆರೆಮನೆ ಮಹಾಬಲ ಹೆಗಡೆಯವರು ಹದಿನೆಂಟು ರಾಗ ಸಾಹಿತ್ಯಗಳ ಬಗೆಗೆ ಸ್ಪಷ್ಟವಾಗಿ ಖಂಡ ತುಂಡವಾಗಿ ಹೇಳ ಬಲ್ಲವರಾಗಿದ್ದರು. ತಾಳಗಳು ಹಾಗೂ ಪದ್ಯಗಳ ಕುರಿತು ಅವರೊಂದಿಗಿನ ಚರ್ಚೆಯ ಪರಿಣಾಮವಾಗಿ ತಾಳವನ್ನು ಮಾತ್ರ ವಿಭಾಗಕ್ಕೆ ಒಳಪಡಿಸುವ ಕುರಿತು ಸ್ವರಜ್ಞಾನದ ಮೂಲಕ ರಾಗದ ಅರಿವು ಮೂಡಿಸಿಕೊಳ್ಳುವ ಕುರಿತು ತಿಳುವಳಿಕೆ ದೊರೆಯಿತು. ಕವಿಯಾದವನಿಗೆ ಇರಬೇಕಾದ ಸಾಹಿತ್ಯ ಪ್ರಜ್ಞೆಯ ಕುರಿತು ತಿಳಿಸಿದರು. ಕಾವ್ಯ ಮೀಮಾಂಸೆ, ಹಳೆಗನ್ನಡ ಕಾವ್ಯಗಳು, ಕಾರಂತರ ಬಯಲಾಟ ಮುಂತಾದವುಗಳ ಅಧ್ಯಯನಕ್ಕೆ ಅವರು ಮಾರ್ಗ ತೋರಿದರು. ತಾಳ ಪ್ರಸ್ತಾರದ ಕುರಿತು ಸ್ಪಂತಿಕೆ ಬೆಳೆಸಿಕೊಳ್ಳಲು ಅಲ್ಲಿಯೇ ಸ್ಫೂರ್ತಿ ದೊರೆಯಿತು.

ಈ ಎಲ್ಲ ಅನುಭವಗಳ ಫಲವಾಗಿ ಯಕ್ಷಗಾನದ ಸರ್ವ ಅಂಗಗಳ ಕುರಿತಾದ ಅರಿವು, ಅವುಗಳನ್ನು ಕಲಿಸಲು–ಕಲಿಯಲು ಅನುಸರಿಸಬೇಕಾದ ಸೂತ್ರಗಳು, ಕ್ರಮ, ವಿಧಾನ ಇವೆಲ್ಲವೂ ಭಾಗವತರಿಗೆ ಕರಗತವಾಗುತ್ತಾ **ನಡೆದವು.**

ಇದರ ಪರಿಣಾಮವಾಗಿ "ತಾಳಲಯಸೂತ್ರ"ವೆಂಬ ಪುಟ್ಟ ಕೈಪಿಡಿಯನ್ನು ತರಗತಿಗಳಿಗೆ ಪಠ್ಯವಾಗಿಸಿ ಹಂಚುತ್ತಾ ತರಬೇತಿ ಕೇಂದ್ರಗಳನ್ನೂ ನಡೆಸುತ್ತಾ ಆ ಕೇಂದ್ರದ ಮಕ್ಕಳಿಗೆ ಪ್ರದರ್ಶನಗಳಿಗೆ ಬೇಕಾದ ಪ್ರಸಂಗಗಳನ್ನು ರಚಿಸುತ್ತಾ ಯಕ್ಷಗಾನ ಕುರಿತು ಆಸಕ್ತಿ ತೋರಿ ಕೋರಿದವರಿಗೆಲ್ಲಾ ಮಾರ್ಗದರ್ಶನ ನಿರ್ದೇಶನಗಳನ್ನು ನೀಡುತ್ತಾ ಯಕ್ಷಗಾನ ರಂಗದಲ್ಲಿ ಪ್ರಭುತ್ವದಿಂದ ಮಾತಾಡಬಲ್ಲ, ಒಬ್ಬ ವ್ಯಕ್ತಿಯಾಗಿ ಬೆಳೆದರು. ಪ್ರಾದೇಶಿಕ ಗಡಿಮಿತಿಗಳನ್ನು ಮೀರಿ ಯಕ್ಷಗಾನ ವಿಕಾಸಗೊಳ್ಳಬೇಕೆಂಬ ಉದ್ದೇಶದಿಂದಲೇ ಕೆಲಸ ಮಾಡುತ್ತಿರುವವರಾದ ಕಾರಣ ಯಕ್ಷಗಾನದ ಎಲ್ಲ ಪ್ರದೇಶದವರೂ ಅವರನ್ನು ಒಪ್ಪುವಂತಾಯಿತು.

ಭಾಗವತರ ಬದುಕಿನ ಅಮೂಲ್ಯವಾದ ನಾಲ್ಕೈದು ದಶಕಗಳ ಅವಧಿ ಯಕ್ಷಗಾನದ ಅಂಗೋಪಾಂಗಗಳ ಕುರಿತಾದ ಲಕ್ಷಣಗಳನ್ನು ಹಾಗೂ ಅವುಗಳ ಕಲಿಕೆಯ ಸೂತ್ರವನ್ನು ಕಂಡುಹಿಡಿಯುವುದರಲ್ಲಿಯೇ ಕಳೆದದ್ದರಿಂದ ಅದನ್ನು ಅವರ ಜೀವಮಾನದ ಸಾಧನೆಯೆಂದು ಗುರುತಿಸಬಹುದು. ಮಾತ್ರವಲ್ಲ, ಈ ಕಾರ್ಯವನ್ನು, ಅವರ ಈ ಶೋಧನೆಗಳನ್ನು ಈಗಾಗಲೇ ಸಾಮಾನ್ಯವಾಗಿ ಯಕ್ಷಗಾನ ರಂಗದ ಬಹುಭಾಗ ಒಪ್ಪಿಕೊಂಡಿರುವುದರಿಂದ ಸಮಗ್ರ ಯಕ್ಷಗಾನ ರಂಗ ಇದನ್ನು ಅನುಮೋದಿಸಿದರೆ ಭವಿಷ್ಯದಲ್ಲಿ ಯಕ್ಷಗಾನದ ಒಂದು ಅಧಿಕೃತ ಪಠ್ಯವೇ ಇದಾಗಿ ಪರಿಣಮಿಸಬಹುದು. ಈ ಕ್ಷೇತ್ರದ ಸರ್ವರೂ ಇದನ್ನು ಅನುಸರಿಸಿ ಯಕ್ಷಗಾನವು ಒಂದು ಸಮಗ್ರವಾದ ಸುಂದರವಾದ ಚೌಕಟ್ಟಿಗೆ ಒಳಪಡುವಂತಾಗುವುದು ಮಾತ್ರವಲ್ಲ ಇಂದು ಯಕ್ಷಗಾನ ಸಹೃದಯರನ್ನು ಕಾಡುತ್ತಿರುವ "ಈ ಕಲೆಯು ಹಳಿತಪ್ಪಿ ಹಳ್ಳಹಿಡಿದು ಹಾಳಾಗಿ ಹೋದೀತೇ?" ಎಂಬ ಆತಂಕ ಮರೆಯಾಗುವುದು. ಅಲ್ಲದೇ ಪ್ರಾದೇಶಿಕ ಭಿನ್ನತೆ ಅನವಶ್ಯಕ ಮೇಲಾಟಗಳೂ ಇಲ್ಲವಾಗುವವು.

ಯಕ್ಷಗಾನ ಲಕ್ಷಣಗ್ರಂಥ :- ಈ ಕೃತಿಯಲ್ಲಿ ಯಕ್ಷಗಾನ ತಾಳ, ರಾಗ, ಛಂದಸ್ಸುಗಳ ಕ್ರಮಾಗತ ವಿವೇಚನೆಗಾಗಿ ಲಯ ಸ್ವರ ಸಾಹಿತ್ಯಗಳನ್ನು ವಿಶ್ಲೇಷಿಸಲಾಗಿದೆ. ಲಯ ಶಬ್ದವಿವೇಚನೆಯಿಂದ ತೊಡಗಿ ಲಯಾಭ್ಯಾಸ ಲಯ ಸಾಧನೆ ತಾಳ ವಿನ್ಯಾಸಗಳು ಅವುಗಳ ನಡೆ, ಘಾತ, ಮುರಿತ, ಮುಕ್ತಾಯ, ರಾಗಗಳ ಅವರೋಹ-ಆರೋಹ ಪದ್ಯ ಪ್ರಬಂಧಗಳ ಮೇಲೆ ಅಕ್ಷರ ವೃತ್ತ ಮತ್ತು ಜನಪದ ಹಾಡುಗಳ ಪ್ರಭಾವ ಮುಂತಾದವುಗಳ ಪರಾಮರ್ಶೆಯಿದೆ.

ಮದ್ದಳೆಯ ನುಡಿಗಟ್ಟು ಮತ್ತು ವಿವಿಧ ಮಟ್ಟಗಳ ಸಂಕಲನ ಮುಂತಾದ ವಿಷಯಗಳು ಯಕ್ಷಗಾನ ಕಲಿಯುವವರಿಗೆ ಭದ್ರ ಬುನಾದಿ ಒದಗಿಸುವಂತಿವೆ.

ಲಯದ ಕುರಿತಾದ ಇವರ ವಿವೇಚನೆ ಲಯದ ದಾರಿಯಲ್ಲಿ ಕ್ರಮಿಸುವ ಸಮಯಾವಧಿಯ ಅರಿವಿಗೆ ಮಾತ್ರಾಧ್ಯಯನದ ಸೂತ್ರ ಬದ್ಧತೆಯ ಆಧಾರವನ್ನು ನೀಡುತ್ತದೆ.

ತಾಳಗಳನ್ನು ಲಯದ ನಿರ್ಲಾಣಗಳೆಂದು ಕರೆದು ತಾಳಗಳನ್ನು ಮಾತ್ರಾಗಣ ಅಂಶಗಣಗಳಾಗಿ ಹೀಗೆ ಯಕ್ಷಗಾನದ ಅಂಗ ಉಪಾಂಗಗಳ ಕುರಿತಾದ ವಿವೇಚನೆ ಇಲ್ಲಿದೆ. ಮದ್ದಳೆ ನುಡಿಸುವ ಕುರಿತು ರಾಗತಾಳಗಳ ಮೈತ್ರಿಯ ಕುರಿತು ನೃತ್ಯ ಅಭಿನಯಗಳು ಸಾಕಾರಗೊಳ್ಳುವ ಮಾರ್ಗ ವಿವೇಚನೆ ಇಲ್ಲಿದೆ.

"ಸಂಗೀತ, ಸಾಹಿತ್ಯ, ನೃತ್ಯ, ಅಭಿನಯದ ಜೊತೆಗೆ ಯಕ್ಷಗಾನದ ಆಹಾರ್ಯದ ಕುರಿತಾಗಿಯೂ ವಿವರಣೆ ಇರುತ್ತಿದ್ದರೆ ಯಕ್ಷಗಾನ ಲಕ್ಷಣ ಹೆಚ್ಚು ಅರ್ಥ ಪೂರ್ಣವೆನಿಸುತ್ತಿತ್ತು".

ಭಾಗವತರು ಈ ಮೇಲಿನ ತಮ್ಮ ಜೀವಮಾನದ ಸಾಧನೆಯ ಕಾರ್ಯ ಪೂರ್ಣ ಸಾಕಾರಗೊಳ್ಳಲು ಸಹಾಯವಾಗುವಂತೆ ಅವುಗಳ ವಿಡಿಯೋ ದಾಖಲೀಕರಣ ಕಾರ್ಯವನ್ನು ಕೂಡಾ ಆರಂಭಿಸಿದ್ದಾರೆ. ಅವರ ಸಾಧನೆ ಗ್ರಂಥ ರೂಪದಲ್ಲಿಯೇ ಉಳಿದರೆ ಪ್ರಾಯಶಃ ಅದನ್ನು ಮುಂದಿನವರು ಓದಿ ಅನುಸರಿಸುವ ಸಾಧ್ಯತೆಗಳು ಕಡಿಮೆ (ಡಾ॥ ಶಿವರಾಮಕಾರಂತರು ತಮ್ಮ

ಯಕ್ಷಗಾನ ರಂಗದ ಶೋಧನೆಗಳ ಫಲವಾಗಿ ರಚಿಸಿದ ಯಕ್ಷಗಾನ ಬಯಲಾಟವನ್ನು ಬಹಳ ಜನ ಓದಿಲ್ಲ. ಆದರೆ ಅವರು ಕನ್ನಡೇತರ ಜನರಿಗಾಗಿ ವಿದೇಶಿ ಜನರಿಗೆ ಪರಿಚಯಿಸುವುದಕ್ಕಾಗಿ ಮಾಡಿದ ಯಕ್ಷಗಾನ ಬ್ಯಾಲೆಗಳನ್ನು ನೋಡಿ ಕಾರಂತರು ಯಕ್ಷಗಾನವನ್ನು ಕುಲಗೆಡಿಸಿದರು ಎಂದು ಬೈದರು!). ಆದ್ದರಿಂದ ಮುಂದಿನ ಪೀಳಿಗೆಯಲ್ಲಿ ಯಕ್ಷಗಾನ ಕಲಿಯಲು ಆಸಕ್ತಿಯಿರುವವರೆಲ್ಲ ನೋಡಿ ಅನುಸರಿಸಿ ಕಲಿಯುವಂತೆ ಇವುಗಳ ದಾಖಲೀಕರಣ ಕಾರ್ಯ ಕೈಗೊಂಡಿದ್ದಾರೆ.

ಅವರ "ಯಕ್ಷಗಾನ ಲಕ್ಷಣಗ್ರಂಥ "ಹಸ್ತಪ್ರತಿಯ ರೂಪದಲ್ಲಿದೆ. ಸೂತ್ರಗಳ ಆಧಾರದಲ್ಲಿ ಅದರಲ್ಲಿನ ಲಯಾಭ್ಯಾಸ, ತಾಳಗಳ ರೂಢೀಕರಣ, ಮಟ್ಟುಗಳ, ರಾಗಗಳ ಅಭ್ಯಾಸ, ತಾಳಾನುಸಾರೀ ಕುಣಿತಗಳು, ಬಿಡ್ತಿಗೆಗಳ ಏಕರೂಪತೆ, ಅಭಿನಯ, ರಂಗಚಲನೆ, ರಂಗ ತಂತ್ರಗಳು ಮುಂತಾದ ಎಲ್ಲ ವಿಭಾಗಗಳ ಕುರಿತು ದಾಖಲೀಕರಣ ಕೆಲಸ ನಡೆಯಬೇಕಾಗಿದೆ. ಅವರ ಶಿಷ್ಯರು, ಅಭಿಮಾನಿಗಳು ತಮ್ಮ ತಮ್ಮ ಮಿತಿಯಲ್ಲಿ ಈ ಕೆಲಸಗಳನ್ನು ಹಂಚಿಕೊಂಡು ಮಾಡುತ್ತಿದ್ದಾರೆ. ಆದರೆ ಇದು ಇಡೀ ಕರಾವಳಿ ಯಕ್ಷಗಾನ ಪ್ರಪಂಚಕ್ಕೆ ಅಗತ್ಯವಾದ ಸಂಗತಿ. ಪ್ರಾದೇಶಿಕ ಭೇದಗಳಿಲ್ಲದ ಇಡೀ ಯಕ್ಷಗಾನ ರಂಗದ ನಾಳೆಯ ಚಿತ್ರವನ್ನು ಏಕಸೂತ್ರಕ್ಕೆ ಅಳವಡಿಸುವ ಸರ್ವಾಂಗ ಸುಂದರಗೊಳಿಸುವ ಒಂದು ಸಾಧನವಾಗಬಹುದಾದ ಸಂಗತಿ ಇದಾಗಿದೆ. ಆದ್ದರಿಂದ ಇಡೀ ಯಕ್ಷಗಾನ ಪ್ರಪಂಚ ಈ ಕುರಿತು ಆಸಕ್ತಿವಹಿಸಬೇಕಾಗಿದೆ.

ಹಸ್ತಪ್ರತಿಗಳ ಅಧ್ಯಯನ :-

ಹೊಸ್ತೋಟದವರ ಇನ್ನೊಂದು ಸಂಶೋಧನ ಕಾರ್ಯವೆಂದರೆ ಕರ್ನಾಟಕದಲ್ಲಿರುವ ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿ ಅಧ್ಯಯನ. ಎಲ್ಲ ವಿಶ್ವವಿದ್ಯಾಲಯಗಳು, ಗ್ರಂಥಾಲಯಗಳನ್ನೆಲ್ಲ ಹುಡುಕಿ ಅಧ್ಯಯನ ಮಾಡಿ ಅವುಗಳ ಸೂಚಿ ತಯಾರಿಸಿದ್ದಾರೆ. ತಮ್ಮ ತಾರುಣ್ಯದಲ್ಲಿಯೇ ಇದ್ದ "ಹುಡುಕುವ ಹವ್ಯಾಸವನ್ನು ಗೀಳಾಗಿ ಮಾಡಿಕೊಂಡು ತಮ್ಮ ಅರವತ್ತರ ವಯಸ್ಸಿನ ಅಂಚಿನಲ್ಲಿ ಆ ಕೆಲಸ ಪೂರೈಸಿದ್ದಾರೆ. ಈ ಕೃತಿಯನ್ನು ಕೆಳದಿಯ ಪ್ರಾಚ್ಯ ಸಂಶೋಧನಾ ಸಂಸ್ಥೆ ಮದ್ರಾಸಿನ ಸಂಸ್ಥೆಯೊಂದರ ನೆರವಿನೊಂದಿಗೆ ಪ್ರಕಟಿಸಿದೆ.

1970 ರಲ್ಲಿಯೇ ಯಲ್ಲಾಪುರ ತಾಲೂಕಿನ ಹಳ್ಳಿಗಳಲ್ಲಿ ಶಿರಸಿ, ಸಿದ್ಧಾಪುರ ತಾಲೂಕುಗಳ ಮೂಲೆ ಮೂಲೆಗಳಲ್ಲಿ ಹುಡುಕಾಟ ನಡೆಸಿದಾಗ ಅವರಿಗೆ ಆದಿ ಪರ್ವ, ಲಕ್ಷ್ಮೀ ಸ್ವಯಂವರ ತಾಡ ಓಲೆಗಳ ಪ್ರತಿಗಳು ದೊರಕಿದ್ದವು. ಆದಿಪರ್ವವು ಅದು ಯಕ್ಷಗಾನದ ಅತಿ ಪ್ರಾಚೀನ ಉಪಲಬ್ಧ ಪ್ರಸಂಗವಿರಬೇಕೆಂದು ಭಾವಿಸಲಾಗಿತ್ತು. ಡಾ॥ ಶಿವರಾಮ ಕಾರಂತರೂ ಸಹ 'ಇದು ನನಗೆ ದೊರೆತ ಪ್ರಸಂಗ ಕೃತಿಗಳಿಗಿಂತ ಹಿಂದಿನದು. ಇದು ಅತಿ ಪ್ರಾಚೀನ ಪ್ರತಿಯಿರಬಹುದು' ಎಂದು ಬರೆದಿದ್ದರು. (ಇದೀಗ ಡಾ॥ ಪ್ರಭಾಕರ ಜೋಶಿಯವರು, ಡಾ॥ ವಸಂತ ಭಾರದ್ವಾಜ ಮುಂತಾದವರು ಅದರ ಪ್ರಾಚೀನತೆಯನ್ನು ಅಲ್ಲಗಳೆದಿದ್ದಾರೆ.) ಹತ್ತಿಪ್ಪತ್ತು ತಾಳೆಗರಿ ಗ್ರಂಥಗಳು ನೂರಾರು ಕೈಬರಹ ಪ್ರತಿಗಳು ಸಿಕ್ಕಿದ್ದವು.

ಅವರ ಅದೇ ಹವ್ಯಾಸವನ್ನು ಜೋಪಾನವಾಗಿ ಕಾದುಕೊಂಡು ಬಂದು ಆದಾಗಿ ಮೂವತ್ತು ವರ್ಷಗಳನಂತರ ಸಮಗ್ರ ಯೋಜನೆ ರೂಪಿಸಿಕೊಂಡು ಕಾರ್ಯಾರಂಭ ಮಾಡಿದರು. ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಹಂಪಿ ವಿಶ್ವವಿದ್ಯಾಲಯ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಶೋಧನಾಕೇಂದ್ರ, ಕೆಳದಿಯ ಪ್ರಾಚ್ಯವಸ್ತು ಸಂಗ್ರಾಹಾಲಯ, ಮೇಲುಕೋಟೆ ಸಂಸ್ಕೃತಿ ಶೋಧನಾ ಕೇಂದ್ರ, ಬಿ.ಎಂ. ಶ್ರೀ ಪ್ರತಿಷ್ಠಾನ, ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರ, ಬಿಮಶ್ರೀ ಪ್ರತಿಷ್ಠಾನ, ಶ್ರೀ ರಾಮಚಂದ್ರಾಪುರ ಮಠದ ತಾಡಜಲೆ ಸಂಗ್ರಹ, ಸೋಂದಾಸ್ವರ್ಣವಲ್ಲೀ ಮಠದ ಪ್ರಾಚ್ಯ ವಸ್ತು ಸಂಗ್ರಹಾಲಯ ಇವುಗಳಲ್ಲೆಲ್ಲ ಉಪಲಬ್ಧವಿರುವ ಯಕ್ಷಗಾನ ಕೃತಿಗಳನ್ನು ಹಾಗೂ ಖಾಸಗಿಯಾಗಿ ಮಲೆನಾಡಿನ ಪ್ರದೇಶಗಳಲ್ಲಿ, ಕರಾವಳಿ ತೀರದಲ್ಲಿ ದೊರೆತ ಬಹುತೇಕ ಯಕ್ಷಗಾನ ಪ್ರಾಚೀನ ಕೃತಿಗಳನ್ನು ಪ್ರತ್ಯಕ್ಷ ಪರಿಶೀಲಿಸಿ ಸಂಕಲಿಸಿ, ಟಿಪ್ಪಣಿಗಳೊಂದಿಗೆ ಅನುಸೂಚಿಯನ್ನು ಸಂಕ್ಷಿಪ್ತ ವರದಿಯೊಂದಿಗೆ ಸಿದ್ಧಪಡಿಸಿ ಪ್ರಕಟಿಸಿದ್ದಾರೆ.

ಮೊದಲನೇ ಭಾಗದಲ್ಲಿ ಯಕ್ಷಗಾನ ಪ್ರಸಂಗದ ಶಿರೋನಾಮೆಯನ್ನು ಆಧಾರವಾಗಿಸಿಕೊಂಡು ಅಕಾರಾದಿ ಅನುಕ್ರಮಣಿಕೆ ನೀಡಿದ್ದಾರೆ. ಮೊದಲು

ಕೃತಿಯ ಹೆಸರು, ಅದರ ಮುಂದೆ ಅವು ದೊರೆತ ನೆಲೆ, ಬೇರೆಡೆಗಳಲ್ಲಿ ಅದೇ ಪ್ರಸಂಗ ದೊರೆತಿದ್ದರೆ ಅವುಗಳ ಸೂಚನೆ ಹಾಗೂ ಅಲ್ಲಿನ ಸಂಖ್ಯೆ, ಅನಂತರ ಆ ಕೃತಿಯ ಕುರಿತು ಸಣ್ಣ ಟಿಪ್ಪಣಿ, ಕಾಲ, ಆ ನಂತರ ಆ ಕುರಿತು ಏನಾದರೂ ವಿಶೇಷವಿದ್ದರೆ ಒಂದು ಚಿಕ್ಕ ವಿವರಣೆ. ಹೀಗೆ ಇದೇ ಕ್ರಮದಲ್ಲಿ ಅವರು ಅಧ್ಯಯನ ಮಾಡಿದ 158 ಹಸ್ತ ಪ್ರತಿಗಳ ಕುರಿತಾದ ದಾಖಲಾತಿ ಮಾಡಿದ್ದಾರೆ.

ಅನಂತರ ಎರಡನೇ ಭಾಗದಲ್ಲಿ (ಗದ್ಯ ಹಾಗೂ ಪದ್ಯಗಳಲ್ಲಿ) ತಾಳೇಗರಿಗಳಲ್ಲಿ ಉಲ್ಲೇಖಿಸಲ್ಪಟ್ಟ ರೀತಿಯಲ್ಲಿ ಕವಿಗಳ ಕುರಿತಾಗಿ ದೊರೆತ ಮಾಹಿತಿಗಳನ್ನು ಉಲ್ಲೇಖಿಸಿದ್ದಾರೆ. ಇಲ್ಲಿಯೂ ಸಹ ಮೊದಲಿಗೆ ಆ ಪ್ರತಿದೊರೆತ ಸ್ಥಳ, ಅನಂತರ ಪ್ರತಿಯಸಂಖ್ಯೆ, ಸ್ವರೂಪ (ತಾಳೆಗರಿಯೇ ಪ್ರತಿ ಕಾಗದವೋ), ಅನಂತರ ಕವಿ ಕುರಿತಾದ ಪದ್ಯ ಈ ಕ್ರಮದಲ್ಲಿ ಉಲ್ಲೇಖಿಸಿದ್ದಾರೆ.

ಮೂರನೇ ಭಾಗದಲ್ಲಿ 'ಯಕ್ಷಗಾನ ಶಿರೋನಾಮೆಯ ನೆನಪಿನಲ್ಲಿ ನೋಡಿದ ಕೆಲವು ಕೃತಿಗಳು' ಎಂಬ ತಲೆ ಬರಹದಡಿಯಲ್ಲಿ ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳಲ್ಲಿ ಅಧ್ಯಯನಕ್ಕೊಳಪಡಿಸಿದ ಹಸ್ತ ಪ್ರತಿಗಳ ಪಟ್ಟಿಯನ್ನು ಆಯಾ ಸಂಸ್ಥೆಗಳ ಕೆಳಗೆ ಪಟ್ಟಿಮಾಡಿ ಕೊಟ್ಟಿದ್ದಾರೆ.

ನಾಲ್ಕನೇ ಭಾಗದಲ್ಲಿ ಅದಲ್ಲದೆ ಹಳ್ಳಿಗಳಲ್ಲಿ ದೊರೆತ ಹಸ್ತಪ್ರತಿಗಳ (ಯಕ್ಷಗಾನ ಹಾಗೂ ಯಕ್ಷಗಾನೇತರ) ಪಟ್ಟಿಯನ್ನು ಪ್ರತ್ಯೇಕವಾಗಿ ನೀಡಿದ್ದಾರೆ. ಅದರಲ್ಲಿ ಯಕ್ಷಗಾನೇತರ ಕೃತಿಗಳೂ ಸೇರಿರುವುದಕ್ಕೆ ಅವರು ಕಾರಣವನ್ನು ಹೀಗೆ ನೀಡಿದ್ದಾರೆ: "ಈ ಸಂಕಲನದಲ್ಲಿ ತಾಳೇಗರಿಗಳ ಕುರಿತು ಹೇಳುವಾಗ ಯಕ್ಷಗಾನಕ್ಕೆ ಅವನ್ನು ಸೀಮಿತಗೊಳಿಸಲಿಲ್ಲ. ಏಕೆಂದರೆ ಇಂದು ಹಳ್ಳಿಗಳಲ್ಲಿ ತಾಳೇಗರಿಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ....................... ಇನ್ನೊಂದು ದೃಷ್ಟಿಯಿಂದಲೂ ಈ ಯಾದಿಯ ಅಗತ್ಯ ಕಂಡಿತು. ನಾನು ಎಲ್ಲೆಲ್ಲಿ ಅಲೆದಾಡಿದ್ದನೋ ಅಲ್ಲೆಲ್ಲ ಹಳ್ಳಿಗರು ಅಭಿಮಾನದಿಂದ ಆಧರಿಸಿದ್ದಾರೆ. ಆಯಾ ಹಳ್ಳಿಗರಿಗೆ ತಮ್ಮಿಂದ ಒಯ್ದ ಪ್ರತಿಗಳನ್ನು ದಾಖಲಿಸಿಲಾಗಿದೆ ಎಂಬ ಸಮಾಧಾನವನ್ನಾದರೂ ನೀಡಬೇಡವೇ? ಹಾಗಾಗಿ ಅದಕ್ಕಾಗಿಯೇ ಒಂದು ವಿಭಾಗವನ್ನು ಮೀಸಲಾಗಿರಿಸಿದೆ".

ಈ ಸಂಗ್ರಹದಲ್ಲಿ ಅವರು ಪಡುವಲಪಾಯದ ಪ್ರತಿಗಳನ್ನು ಮಾತ್ರ ಅಧ್ಯಯನ ಮಾಡದೆ ಯಾವುದೇ ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಪರಿಶೀಲಿಸಿದ್ದಾರೆ. ಕೆಲವು ಪದ್ಯಗಳ ಟಿಪ್ಪಣಿ ನೀಡಿದ್ದಾರೆ. ಆ ಪದ್ಯಗಳನ್ನು ವಿಭಿನ್ನ ಪ್ರದೇಶದ ವಿವಿಧ ಕವಿಗಳ ಕೃತಿಗಳ ಒಳಪಂಟಗಳಿಂದ ಆಯ್ದುಕೊಂಡಿದ್ದಾರೆ. "ಕೃತಿಗೆ ಸಂಬಂಧಿಸಿ ನೋಡಿದರೆ ಸಾಹಿತ್ಯದ ಸ್ವರೂಪದಲ್ಲಿ ಪದ್ಯಗಳ ರಚನಾ ಕ್ರಮದಲ್ಲಿ ಇರುವ ಯಕ್ಷಗಾನೀಯತೆಯನ್ನು ಗುರುತಿಸುವ ವಸ್ತುನಿಷ್ಠತೆ ಬೆಳೆಯಲು ಎಂಬ ನಿರ್ದಿಷ್ಟ ಉದ್ದೇಶದಿಂದಲೇ ಈ ವಿಭಾಗವನ್ನು ಮುಂದಿಟ್ಟಿದ್ದೇನೆ". ವೀರಶೈವರ ಜೈನರ ಪರಿಭಾಷೆಯ ಕುರಿತಾದ ಭಾಗವನ್ನು ಮುಂದಿರುಸಿದ್ದಾರೆ. ಸಣ್ಣಾಟ ದೊಡ್ಡಾಟ ಮೂಡಲಪಾಯಗಳ ಹಾಗೂ ಕೊರವಂಜಿ ಕತೆಗಳನ್ನು ಇಲ್ಲಿ ಸೇರಿಸಲಾಗಿದೆ.

ಕೊನೆಯಲ್ಲಿ ಈ ಅಭಿಯಾನದ ಗುರಿ, ಉದ್ದೇಶ, ನಡೆದ ಹಾದಿ, ಪಟ್ಟ ಶ್ರಮ ಪೂರ್ಣಗೊಳಿಸಿದ ಕಾರ್ಯ ಅದರ ಸ್ವರೂಪಗಳ ಕುರಿತಾದ ಮನಸ್ಸಿನ ಮಾತುಗಳಿವೆ. ಈ ಕೆಲಸದ ಶ್ರಮದ ನಡುವೆ ಪಟ್ಟ ಅನುಭವಗಳು ಹೊಸ ಗಾದೆಯಾಗಿ ಹೊಳೆದ ಹೊಳಹುಗಳಿವೆ. ತಾಳೆ ಗರಿಗಳು ತಮ್ಮ ಆಯಮಾನಕ್ಕೆ ಅನುಗುಣವಾಗಿ ಜೀರ್ಣವಾಗಿ ಮಾಸಿ ಮುಂತಾಗಿ ಹೋದಾಗ ಅದನ್ನು ಹುಷಾರಾಗಿ ಜಾಗರೂಕತೆಯಿಂದ ಶುಚಿಗೊಳಿಸಿ ಮಸಿ ಹಚ್ಚಿ ಹರಿಯುದಂತೆ ಜೋಪಾನವಾಗಿ ಹಿಡಿದು ಸಹನೆಯ ಪರಮಾವಧಿ ಪ್ರದರ್ಶಿಸಬೇಕಾದ ಪ್ರಸಂಗದಲ್ಲಿ "ತಾಳ್ಮೆಯಿಲ್ಲದವನಿಗೆ ತಾಳೇಗರಿ ಸಹವಾಸ ಬೇಕೆ?" ಎಂದು ಗಾದೆ ಹೊಳೆದದ್ದು ಸ್ವಾರಸ್ಯವಾಗಿದೆ.

ಹೀಗೆ ಒಂದೆರಡು ವರ್ಷಗಳ ಒಂದು ಶೋಧನಾ ಅಭಿಯಾನದ ಪ್ರತಿಫಲವನ್ನು ಒಂದು ಕೃತಿಯಾಗಿಸಿ ಮುಂದಿನ ಸಂಶೋಧಕರಿಗೆ ಈ ನಿಟ್ಟಿನಲ್ಲಿ ಒಂದು ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ. ತಾಳೆಗರಿಗಳನ್ನು ಓದುವ ಕೌಶಲ್ಯವಿರುವ, ಯಕ್ಷಗಾನ ಪದ್ಯಗಳ ಕುರಿತು ಪೂರ್ಣ ಅನುಭವವಿರುವ, ಅಸಾಧಾರಣ ಸಹನೆ, ಶ್ರಮ ಪಡುವ ಶಕ್ತಿ, ಎಲ್ಲ ಬಗೆಯ ಅನನುಕೂಲತೆಗಳನ್ನು ಸಹಿಸುವ ಸಾಮರ್ಥ್ಯ ಇವೆಲ್ಲವೂ ಇರುವಂಥ ಹಾಗೂ ಹಳ್ಳಿಗರೊಡನೆ ಆತ್ಮೀಯವಾಗಿ ಬೆರೆಯಬಹುದಾದ ಅಪರೂಪದ ವ್ಯಕ್ತಿಗಳಿಗೆ ಮಾತ್ರ ಸಿದ್ಧಿಸುವ

ಸಿದ್ಧಿಯಿದು. ಪ್ರಾಯಶಃ ಭಾಗವತರತರಂಥವರಿಗಲ್ಲದೆ ಇತರರಿಗೆ ಅಸಾಧ್ಯವೆನ್ನಬಹುದಾದ ಕೆಲಸವಿದು.

ಗೋಷ್ಠಿ – ಸಮ್ಮೇಳನಗಳು:–

ಸದಾ ಯಕ್ಷಗಾನದ ಕುರಿತು ಚಿಂತನೆ, ಪ್ರಯೋಗ, ಕಲಿಸುವಿಕೆ ಮುಂತಾದವುಗಳಲ್ಲಿಯೇ ಮುಳುಗಿರುವ ಹೊಸ್ತೋಟ ಭಾಗವತರಿಗೆ, ಗೋಷ್ಠಿಗಳ ಪ್ರಬಂಧಗಳು, ಸಮ್ಮೇಳನಗಳ ಗದ್ದಲಗಳು ಅಷ್ಟೇನೂ ಇಷ್ಟವಾಗುವುದಿಲ್ಲ. ಆದರೆ ತಮ್ಮ ಚಿಂತನೆಗಳಿಗೆ ಚೌಕಟ್ಟು ಒದಗಿಸುವ ನಿಟ್ಟಿನಲ್ಲಿ, ಸ್ಪಷ್ಟತೆ, ಖಚಿತತೆ, ಕಾಣಿಸುವ ದೃಷ್ಟಿಯಿಂದ ಇಂತಹ ಸಂದರ್ಭಗಳಲ್ಲಿ ವಿಚಾರ ಮಂಡಿಸಿದ್ದಾರೆ. ಅವುಗಳಲ್ಲಿ ಕೆಲವು ಕೆಳಗಿನಂತಿವೆ:

- ಕಾನಸೂರು ಚಿಂತನ ವೇದಿಕೆಯವರು ನಡೆಸಿದ ಯಕ್ಷಗಾನ ಕುರಿತಾದ ವಿಚಾರ ಗೋಷ್ಠಿಯಲ್ಲಿ ಯಕ್ಷಗಾನ ಹಿಮ್ಮೇಳ ಕುರಿತು ಪ್ರಬಂಧ.
- ಕಾರವಾರ ಯಕ್ಷಗಾನ ಸಮ್ಮೇಳನದಲ್ಲಿ ಹಿಮ್ಮೇಳದ ಕುರಿತು ಪ್ರಬಂಧ.
- ಕಲ್ಕತ್ತಾದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಯಕ್ಷಗಾನ ನೃತ್ಯಗಳ ಕುರಿತು ಪ್ರಾತ್ಯಕ್ಷಿಕೆ.
- ಮೈಸೂರು ಉತ್ತರ ಕನ್ನಡ ಸಾಂಸ್ಕೃತಿಕ ಸಂಘದವರು ನಡೆಸಿದ ಯಕ್ಷಗಾನ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ.
- ಶಿವಮೊಗ್ಗಾ ಕರ್ನಾಟಕ ಸಂಘದಲ್ಲಿ ಯಕ್ಷಗಾನ ಪ್ರಾತ್ಯಕ್ಷಿಕೆ.
- ಕೋಳಿಗಾರಿನಲ್ಲಿ ಯಕ್ಷಗಾನ ಪ್ರಾತ್ಯಕ್ಷಿತೆ.
- ಉಡುಪಿಯ ಅಂಬಲ ಪಾಡಿಯಲ್ಲಿ ವ್ಯವಸ್ಥೆಗೊಳಿಸಿದ್ದ ಮಟ್ಟುಗಳ ಪ್ರಾತ್ಯಕ್ಷಿಕೆ.
- ಉಡುಪಿಯ ರಂಗ ಸಿದ್ಧಾಂತ ಸಂಗ್ರಹ ಸಂಸ್ಥೆಗೆ ನೂರಾರು ಮಟ್ಟುಗಳ ಧ್ವನಿ ಸುರುಳಿ ದಾಖಲಾತಿ.
- ಬೆಂಗಳೂರು ತಾಳವಾದ್ಯ ಸಂಸ್ಥೆಯಿಂದ ತಾಳ ಪ್ರಬಂಧ ಪ್ರಕಟವಾಗಿದೆ.

ಕಲಿಸುವ ಹಾದಿಯಲ್ಲಿ

"ಯಕ್ಷಗಾನ ಕುರಿತಾದ ಸಂಶೋಧನೆಗೆ ಶಿವರಾಮಕಾರಂತರು ನನಗೆ ಸ್ಫೂರ್ತಿಯಾದರೆ ಯಕ್ಷಗಾನ ಕಲಿಸುವುದಕ್ಕೆ ಶಿವರಾಮ ಹೆಗಡೆ (ಕೆರೆಮನೆ) ಯವರೇಸ್ಫೂರ್ತಿ" ಎಂದು ಹೊಸ್ತೋಟದವರು ಹೇಳಿಕೊಂಡಿದ್ದಾರೆ. ಯಕ್ಷಗಾನದ ಲಯ, ತಾಳ, ಕುಣಿತ ಮಟ್ಟು ಮುಂತಾದವುಗಳ ಕುರಿತಾಗಿ ಸೂತ್ರಗಳನ್ನು ಕಂಡುಕೊಳ್ಳುತ್ತಿದ್ದಂತೆಯೇ ಯಕ್ಷಗಾನ ಕಲಿಸುವ ಸೂತ್ರ ಕೈವಶ ವಾದಾಗ ಅವರು ಮೊದಲು ಕಲಿಸಲು ಆರಂಭಿಸಿದ್ದು ಮಕ್ಕಳಿಗೆ. ದೊಡ್ಡವರಿಗೆ ಕಲಿಸುವುದಕ್ಕಿಂತ ಮಕ್ಕಳಿಗೆ ಕಲಿಸುವುದೇ ಒಳ್ಳೆಯದೆಂದು ಅವರಿಗೆ ಅನ್ನಿಸಿದ್ದು ಏಕೆಂದರೆ ಮಕ್ಕಳು ಉತ್ಸಾಹ ಶ್ರದ್ಧೆಗಳಿಂದ ಕಲಿಯುತ್ತಾರೆ. ಅಲ್ಲದೆ ದೊಡ್ಡವರಿಗೆ ಕಲಿಸಲು ಹೊರಟರೆ ಈಗಾಗಲೇ ಬಿಡ್ತಿಗೆಗಳಿಗೆ ಅನುಕರಣೆಯ ಆಧಾರದ ಮೇಲೆ ಕುಣಿಯತೊಡಗಿರುವ ಅವರಿಗೆ ಅದನ್ನೆಲ್ಲಾ ಮರೆತು ಒಂದೂ ಎರಡು ಎಂದು ಚಪ್ಪಾಳೆ ತಟ್ಟಿ ಲಯಾಭ್ಯಾಸ ಮಾಡಿ ಅದರ ಆಧಾರದ ಮೇಲೆ ಕುಣಿತ ಅಭ್ಯಾಸ ಮಾಡುವ ಸಹನೆ ಇರುವುದಿಲ್ಲ. "ಚಿಕ್ಕ ಮಕ್ಕಳು ಏಳನೇ ತರಗತಿವರೆಗಿನ ಹುಡುಗರ ಸಾನ್ನಿಧ್ಯ ಸಂಪರ್ಕವೆಂದರೆ ಹೂದೋಟದಲ್ಲಿ ವಿಹಾರ ಮಾಡಿದ ಹಾಗೆ. ಬಾಲನಂದನದಲ್ಲಿ ಕೃಷಿಮಾಡಿದ ಖುಷಿಸಿಕ್ಕಿದೆ ನನಗೆ. "ಹೀಗೆ ಯೋಚಿಸಿ ಮಕ್ಕಳಿಗೆ ಕಲಿಸಲಾರಂಭಿಸಿದರು. ಅವರ ಮೊಟ್ಟಮೊದಲ ತರಬೇತಿ ಕಾರ್ಯಕ್ರಮ ಆರಂಭವಾದದ್ದು ಶಿರಸಿ ತಾಲೂಕು ನೀರ್ನಳ್ಳಿ ಬಳಿಯ ದ್ಯಾವರ ಕೊಪ್ಪ ಶಾಲೆ. ಹಾಗೆ ಆರಂಭವಾಗಿ ಮುಂದೆ ತರಬೇತಿ ಕೇಂದ್ರಗಳ ಸಂಖ್ಯೆ ಅರವತ್ತರ ಸಮೀಪಕ್ಕೆ ಬಂದು ನಿಂತಿದೆ. ಮಕ್ಕಳು, ದೊಡ್ಡವರು, ಹೆಣ್ಣು ಮಕ್ಕಳು, ಹೊಟೇಲ್ ಕಾರ್ಮಿಕರು, ಅಂಧಮಕ್ಕಳು, ಅಂಚೆಯಣ್ಣಗಳು, ಸರ್ಟಿಫೈಡ್‌ಶಾಲೆ, ಸರ್ವೋದಯ ಶಾಲೆ ಹೀಗೆ ಯಾವ ಭೇದವೂ ಇಲ್ಲದೆ ಎಲ್ಲೆಲ್ಲಿ ಯಕ್ಷಗಾನ ಕಲಿಯುವ ಆಸಕ್ತಿ ಇದೆಯೋ ಅಲ್ಲೆಲ್ಲ ಪ್ರೀತಿಯಿಂದ ಹೋಗಿ ಕಲಿಸಿದ್ದಾರೆ. ವ್ಯಕ್ತಿ ಮೇಳಗಳವರಿಗೆ ನಿರ್ದೇಶನ ಹಾಗೂ ತರಬೇತಿ ನೀಡಿದ್ದಾರೆ. ಕುಣಿತ ಅಭಿನಯಗಳಲ್ಲಿ ಮಾತ್ರವಲ್ಲ ಭಾಗವತಿಕೆ ಮೃದಂಗವಾದನ ಹೀಗೆ ಯಕ್ಷಗಾನದ ಯಾವ ಅಂಗದಲ್ಲಿ ಆಸಕ್ತಿಯಿದೆಯೋ ಆ ಅಂಗದಲ್ಲೆಲ್ಲ ತರಬೇತಿ ನೀಡಿದ್ದಾರೆ. ಪ್ರತಿಫಲವೇನನ್ನೂ ಸ್ವೀಕರಿಸದೇ

ಬಸ್ ಚಾರ್ಜಿನ ಹಣಕ್ಕಿಂತ ಹೆಚ್ಚಿಗೆ ಯಾರಾದರೂ ಕೊಟ್ಟರೆ ತಕ್ಷಣ ಎದುರಿಗೆ ಅವಶ್ಯಕತೆಯಿರುವ ಸತ್ಪಾತ್ರರು ಸಿಕ್ಕರೆ ಅವರಿಗೆ ಕೊಟ್ಟು ಹಗುರಾಗಿ ಬಿಡುವ, ಯಾವುದೇ ಸಂಘ ಸಂಸ್ಥೆಗಳ ಅಂಕೆ.ಯೂ ಒಳಪಡದ ಸ್ವಾತಂತ್ರ್ಯ ಬಯಸುವ. ಎಂತಹ ಅನಾನುಕೂಲಗಳನ್ನು ಲೆಕ್ಕಿಸದೆ, ಕಲಿಯುವವರ ಆಸಕ್ತಿಯೊಂದನ್ನೇ ಅಪೇಕ್ಷಿಸುವ, ಸಾಮಾನ್ಯರಿಗೆ ಸ್ವಲ್ಪ ವಿಕ್ಷಿಪ್ತವೆಂದೆನಿಸುವ ಈ "ಗುರು"ಗಳನ್ನು ಶಿಷ್ಯರು ಭಯ ಭಕ್ತಿಗಿಂತ ಹೆಚ್ಚಾಗಿ ಪ್ರೀತಿ ವಿಶ್ವಾಸಗಳಿಂದಲೇ ಸ್ವೀಕರಿಸಿದ್ದಾರೆ. ಗುರುಗಳಿಗೆ ಸಿಟ್ಟು ಬಂದೀತೆಂದು ಭಯಪಟ್ಟರೂ ಇಷ್ಟೇ ಕಲಿಯಬೇಕೆಂಬ ನಿರ್ಬಂಧ ಹೇಳುವವರಲ್ಲ. ತಾನು ಶ್ರಮಪಟ್ಟು ಕಲಿಸುವರೇ ವಿನಹ ವಿದ್ಯಾರ್ಥಿಗಳಿಗೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಗ್ರಹಿಸಲು ಬಿಡುವರು.

ಈ ಕಲಿಸುವ ಹಾದಿಯಲ್ಲಿ ಅಂಧ ಮಕ್ಕಳಿಗೆ ಯಕ್ಷಗಾನ ಕಲಿಸಿದ ಸಾಹಸ ಭಾಗವತರ ಬದುಕಿನ ಅತ್ಯಂತ ರೋಮಾಂಚಕ ಸಾಧನೆ. ಇತರರಿಗೆ ಕಲಿಸಿದಂತೆ ಇವರಿಗೆ ಕಲಿಸಲಾಗುವುದಿಲ್ಲವೆಂಬುದು ತಿಳಿದಾಗ ಭಾಗವತರಿಗೆ ಸ್ವಲ್ಪ ದಿಕ್ಕು ತೋಚದಂತಾಗಿತ್ತು. ಆದರೆ ಅಂಧರಿಗೆ ಕಲಿಸುವ ಮಾರ್ಗವನ್ನು ಅವರಿಗೆ ಅಂಧ ಮಕ್ಕಳೇ ತೋರಿಸಿಕೊಟ್ಟರು. ಈ ಸಮಯದಲ್ಲಿ ಕುಣಿತ ಕಲಿತ್ತಿದ್ದ ಅಂಧ ಹುಡುಗನೊಬ್ಬ ಮತ್ತೊಬ್ಬ ಅಂಧನನ್ನು ಕೂರಿಸಿಕೊಂಡು ಅವನ ಕೈಗಳನ್ನು ಕಾಲುಗಳಂತೆ ಬಳಸಿ ಕಲಿಯಬೇಕಾದವನಿಗೆ ಕಾಲು ಹಾಕಲು ತೋರಿಸಿಕೊಟ್ಟದ್ದು, ರಂಗ ಚಲನೆಗೆ ಅವನ ಭುಜದ ಮೇಲೆ ತಟ್ಟಿ ಸಂಕೇತ ನೀಡುತ್ತಾ ಕಲಿಸಿದ್ದು, ಇವೆಲ್ಲ ನಿಜಕ್ಕೂ ಅವರಿಗೆ ಸೋಜಿಗವೆನಿಸಿದವು. ಮುಂದೆ ಇದೇ ಅಂಧ ಮಕ್ಕಳಿಂದ ಯಜ್ಞರಕ್ಷಣೆ ಆಖ್ಯಾನ ಅಭ್ಯಾಸ ಮಾಡಿಸಿ ಪ್ರದರ್ಶಿಸಿದಾಗ ಎಲ್ಲರಿಗೂ ಅಚ್ಚರಿ. ರಾಮಕೃಷ್ಣಾಶ್ರಮದ ಪುರುಷೋತ್ತಮಾನಂದ ಜಿಯವರು "ಮಾನವ ಚಂದ್ರ ಗ್ರಹದೊಳಗೆ ಕಾಲಿಟ್ಟ" ಎಂಬುದಕ್ಕಿಂತಲೂ ಇದು 'ಕುತೂಹಲದ ಸಂಗತಿಯಾಗಿದೆ' ಎಂದು ಉದ್ಗರಿಸಿದರು.

ಭಾಗವತರು ನಡೆಸಿದ ತರಬೇತಿ ಕೇಂದ್ರಗಳ ಪಟ್ಟಿ ಈ ಕೆಳಗಿನಂತಿದೆ:-

1) ನೀರ್ನಳ್ಳಿ ಬಳಿ ದ್ಯಾವರಕೊಪ್ಪ ಶಾಲೆ (ಶಿರಸಿ ತಾಲೂಕು). 2) ಮಾಸೂರು (ಶಿರಸಿ ತಾಲೂಕು) ಪಟಗಾರ ತಂಡ. 3) ಸಿದ್ಧಾಪುರ ಮ.ಗಾ.ಶ. ಕಾಲೇಜು. 4) ಅಜ್ಜಿಬಳ (ಶಿರಸಿ ತಾಲೂಕು) ಶಾಲೆ. 5) ಅಚವೆ (ಅಂಕೋಲಾ ತಾಲೂಕು).

6) ಸೋಂದಾ (ಶಿರಸಿ ತಾಲೂಕು). 7) ಕೋಳಿಗಾರ (ಶಿರಸಿ ತಾಲೂಕು. 8) ಸಹ್ಯಾದ್ರಿ ಮಕ್ಕಳ ಯಕ್ಷಗಾನ ಸಮೂಹ ಶಿರಸಿ (ಸಮಯ ಸಮೂಹ). 9) ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮೂಹ ಶಿರಸಿ. (ಸಮಯ ಸಮೂಹ) 10) ಸಂಪಖಂಡ (ಶಿರಸಿ ತಾಲೂಕು). 11) ಹಾರ್ಸಿಕಟ್ಟಾ (ಸಿದ್ಧಾಪುರ ತಾಲೂಕು) 12) ಮೂರೂರು (ಕುಮಟಾ ತಾಲೂಕು 13) ಸಾಲ್ಕಣಿ (ಶಿರಸಿ ತಾಲೂಕು) 14) ಶಿವಮೊಗ್ಗಾ ತೆಂಕು ಬಡಗು ಯಕ್ಷಗಾನ ಪ್ರತಿಷ್ಠಾನ. 15) ಪ್ರಮಾಣಿತ ಶಾಲೆ (ಸರ್ಟಿಫೈಡ್ ಶಾಲೆ) ಶಿವಮೊಗ್ಗಾ. 16) ಶಾರದಾದೇವಿ ಅಂಧರ ವಿಕಾಸಕೇಂದ್ರ, ಶಿವಮೊಗ್ಗ. 17) ನವೋದಯ ಶಾಲೆ ಗಾಜನೂರು. ಶಿವಮೊಗ್ಗ. 18)ಮೈಸೂರು ಮಹಾರಾಜಾ ಸಂಸ್ಕೃತ ಪಾಠಶಾಲೆ. 19) ಯಕ್ಷ ಮಂಡಳ ಉಡುಪಿ. 20) ಬ್ರಹ್ಮಾವರ. 21) ಬಾರ್ಕೂರು. 22) ಸಾಕೇತ ಕಲಾವಿದರು ಪುರಪ್ಪೆ ಮನೆ. (ಸಾಗರ ತಾ.) 23) ನಂಜನಗೂಡು. 24) ಹೊನ್ನಾವರ ಅಂಚೆ ಬಳಗ. 25) ವಾನಳ್ಳಿ (ಸಿರ್ಸಿ ತಾ.) 26) ಮಲೆನಾಡು ಯಕ್ಷಗಾನ ಪ್ರತಿಷ್ಠಾನ ...ಳಗುಪ್ಪಾ. 27) ತಲವಾಟ (ಸಿದ್ಧಾಪುರ ತಾ) 28) ವನಶ್ರೀ ಸಾಗರ 29) ಬೆಳೆಯೂರು (ಸಾಗರ ತಾ) 30) ಪಂಚಲಿಂಗ (ಸಿರ್ಸಿ ತಾ.) 31) ಗೋಳಿ (ಸಿರ್ಸಿ ತಾ) 32) ಧಾರವಾಡ 33) ನಮ್ಮ ಭೂಮಿ (ಹಟ್ಟಿಯಂಗಡಿ) 34) ವಂದಿಗೆ (ಅಂಕೋಲಾ) 35) ಒಕ್ಕಡ ಅಂಕೋಲಾ ತಾ 36) ಶೆಟಗೇರಿ (ಅಂಕೋಲಾ ತಾ.) 37) ಬುದ್ಧಿಮಾಂದ್ಯರ ಶಾಲೆ ಶಿವಮೊಗ್ಗ. 38) ಶಿರಸಿ ಮೇಳ 39) ಇಡಗುಂಜಿ ಮೇಳ 40) ಅಮೃತೇಶ್ವರಿ ಮೇಳ 41) ಹಾಡಿಗಲ್ಲು. 42) ಸಮನ್ವಯ ಕೆಳದಿ (ಸಾಗರ ತಾ). 43) ಪ್ರಜ್ಞಾಭಾರತಿ ಸಾಗರ 44) ಹೇರೂರು (ಸಿದ್ದಾಪುರ ತಾ) 45) ಸೋಮನಳ್ಳಿ (ಸಿರ್ಸಿ ತಾ) 46) ಮಂಜಿಕೇರಿ ಮಳಿಗೆಮನೆ (ಯಲ್ಲಾಪುರ ತಾ) 47) ಭೈರುಂಬೆ (ಸಿರ್ಸಿ ತಾ) 48) ಗಡಿಮನೆ ಮೇಳ (ಸಿರ್ಸಿ ತಾ) 49) ಕೊಳಗೆ (ಸಿದ್ಧಾಪುರ ತಾ) 50) ಮೋತಿಗುಡ್ಡ (ಅಂಕೋಲಾ) 51) ಶಿವಾರಗುಡ್ಡ (ಮಂಡ್ಯ ನವೋದಯ ಶಾಲೆ) 52) ನಂದೋಡಿ (ಸಾಗರ ತಾ.) 53) ಪೆಗ್ಗರಣೆ (ಸಿದ್ಧಾಪುರ ತಾ) 54) ಓರೇಸರ (ಸಿರ್ಸಿ ತಾ) 55) ಗೇರಸೊಪ್ಪಾ ಈ ಮೇಲಿನ ತರಬೇತಿ ಕೇಂದ್ರಗಳಲ್ಲಿ ಕೆಲವು ಇಂದಿನ ಯಕ್ಷಗಾನ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿವೆ. ಹಲವಾರು ಕಲಾವಿದರು ಇಂದು

ರಂಗದಲ್ಲಿ ತಮ್ಮ ಸಾಧನೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಭಾಗವತರಾಗಿ ಹಿಮ್ಮೇಳವಾದಕರಾಗಿ ಯಕ್ಷಗಾನ ಶಿಕ್ಷಕರಾಗಿ, ವೃತ್ತಿ ಮೇಳಗಳ ಕಲಾವಿದರಾಗಿ ಹವ್ಯಾಸಿ ತಂಡಗಳಾಗಿ ಕೊನೆಗೆ ಕನಿಷ್ಠ ಪಕ್ಷ ಯಕ್ಷಗಾನ ಸಹೃದಯೀ ಪ್ರೇಕ್ಷಕರಾಗಿ ಯಕ್ಷಗಾನದ ಸದಭಿರುಚಿ ಉಳಿಯುವಂತೆ ಬೆಳೆಯುವಂತೆ ಮಾಡಿದರು.

ಭಾಗವತರ ಆರಂಭದ ತರಗತಿಗಳಲ್ಲೊಂದಾದ ಸೋಂದಾ ಕ್ಲಾಸಿನ ಹುಡುಗರು ಹೆಚ್ಚಿನ ಪರಿಣತಿ ಪಡೆದು ಒಳ್ಳೆಯ ಸಂಘಟನೆಯಲ್ಲಿ ಬಹಳಷ್ಟು ಆಟಗಳನ್ನು ಆಡಿ ಜನ ಮೆಚ್ಚುಗೆ ಗಳಿಸಿತು. ಆನಂತರ ಮೇಳವನ್ನು ಶ್ರೀ ಲಕ್ಷ್ಮೀ ನರಸಿಂಹ ಯಕ್ಷಗಾನ ಮಂಡಳಿ ಎಂದು ರಜಿಸ್ಟರ್ ಮಾಡಿಸಿ ವೇಷಭೂಷಣಗಳನ್ನೂ ಸಿದ್ಧಪಡಿಸಿಕೊಂಡು ಸ್ವಯಂಪೂರ್ಣ ಹವ್ಯಾಸಿ ಮೇಳವಾಗಿ ರೂಪುಗೊಂಡಿತು. ಈ ತಂಡದಲ್ಲಿಯೇ ತಯಾರಾದ ಭಾಗವತರ ಶಿಷ್ಯರು ಈಗ ಯಕ್ಷಗಾನ ಕಲಿಸುತ್ತಾ ಭಾಗವತಿಕೆ ಮಾಡುತ್ತಾ ತಮ್ಮ ಸಾಧನೆ ಮಾಡಿದ್ದಾರೆ.

ಶಿರಸಿಯ ಸಹ್ಯಾದ್ರಿ ಮಕ್ಕಳ ಯಕ್ಷಗಾನ ಸಮೂಹ (ಸಮಯ ಸಮೂಹ) ಗಂಡುಮಕ್ಕಳೆಲ್ಲ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಊರು ಬಿಟ್ಟು ಓದಲು ಹೋದಾಗ ಉಳಿದ ಕೆಲವು ಹೆಣ್ಣು ಮಕ್ಕಳ ಜೊತೆಗೆ ಸಾಲ್ಕಣಿ ಕ್ಲಾಸಿನಲ್ಲಿ ಭಾಗವತರಿಂದ ಕಲಿತ ಕೆಲವು ಹುಡುಗಿಯರನ್ನು ಸೇರಿ ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮೂಹವಾಗಿ (ಇದು ಸಮಯ ಸಮೂಹವೇ). ಇಂದಿಗೂ ಆ ತರುಣಿಯರೆಲ್ಲ ವಿವಾಹವಾಗಿ ತಾಯಂದಿರಾದರೂ ತಮ್ಮ ಮಕ್ಕಳಿಗೂ ಯಕ್ಷಗಾನ ಕಲಿಸಿ ತಾಯಿಯಂದಿರು ಮಕ್ಕಳೆಲ್ಲ ಸೇರಿ ಯಕ್ಷಗಾನ ಪ್ರದರ್ಶನಗಳನ್ನು ನೀಡುತ್ತಿದ್ದಾರೆ.

ತಲವಾಟದ ತಂಡದ ಹುಡುಗಿಯರಲ್ಲಿ ಕೆಲವರು ವಿವಾಹಿತೆಯರು ತಾಯಂದಿರೂ ಆಗಿಯೂ ಇಂದಿಗೂ ಯಕ್ಷಗಾನಗಳಲ್ಲಿ ಪಾತ್ರವಹಿಸುತ್ತಿದ್ದಾರೆ.

ಶಿವಮೊಗ್ಗ ಶಾರದಾದೇವಿ ಅಂಧರ ವಿಕಾಸ ಕೇಂದ್ರದ ಮಕ್ಕಳು ಮೂರ್ನಾಲ್ಕು ಪ್ರಸಂಗಗಳನ್ನು ಕಲಿತು ತಿರುಗಾಟಗಳನ್ನು ಮಾಡಿ ಒಳ್ಳೆಯ ಹೆಸರುಗಳಿಸಿ ಸಂಸ್ಥೆಗೂ ಕೀರ್ತಿ ಆದಾಯಗಳು ಬರುವಂತೆ ಮಾಡಿದ್ದಾರೆ.

ಕೋಳಿಗಾರು ಕ್ಲಾಸಿನಲ್ಲಿಯೂ ಒಳ್ಳೆಯ ಪ್ರಗತಿ ನಡೆದು ಕಮಲನಾಥೇಶ್ವರ ಯಕ್ಷಗಾನ ಮಂಡಳಿಯಾಗಿ ನಾಲ್ಕೈದು ವರ್ಷ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ. ಈ ತಂಡದಲ್ಲಿ ಕಲಿತವರು ವೃತ್ತಿ ಮೇಳದಲ್ಲಿ **ವೇಷಭೂಷಣ ತಯಾರಿಸಿ ಆಟಗಳಿಗೆ ಮುಖವರ್ಣಿಕೆ ಹಾಗೂ ವೇಷಭೂಷಣ** ಪೂರೈಸುವವರೂ ಇದ್ದಾರೆ. ಹೆಸರಾಂತ **ವೇಷಧಾರಿಗಳಾಗಿ, ಭಾಗವತರಾಗಿ** ಸಾಧನೆ ನಡೆಸಿದ್ದಾರೆ. ಹಾರ್ಸಿಕಟ್ಟಾದ ವಿಶ್ವನಾಥ **ಶೆಟ್ಟರು** ವೇಷಭೂಷಣ ಸಿದ್ಧಪಡಿಸಿ ಹಲವು ವರ್ಷಗಳ ಕಾಲ ಆಟಗಳಿಗೆ ಮುಖವರ್ಣಿಕೆ ಹಾಗೂ ವೇಷಭೂಷಣ ಒದಗಿಸಿದವರು ಆಹಾರ್ಯ.

ಸಂಪಖಂಡ ತರಗತಿಯ ಶಿಷ್ಯರು ಹಿಮ್ಮೇಳವಾದಕರಾಗಿ ಹವ್ಯಾಸಿ ಕಲಾವಿದರಾಗಿ ಹೆಸರು ಮಾಡಿದ್ದಾರೆ. ಮೂರೂರು ತರಗತಿಯ ಶಿಷ್ಯರು ವೃತ್ತಿ ಮೇಳದಲ್ಲಿ ಸ್ತ್ರೀ ವೇಷದ ಪಾತ್ರಧಾರಿಗಳಾಗಿದ್ದಾರೆ. ಕೆಲವರು ಹಿಮ್ಮೇಳವಾದಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಭಾಗವತರ ಮೊದಲ ತರಗತಿ ನೀರ್ನಳ್ಳಿ ಶಾಲೆಯ ಶಿಷ್ಯ ನೀರ್ನಳ್ಳಿ ರಾಮಕೃಷ್ಣ ಸಿನಿಮಾ ನಟನಾಗಿ ಪ್ರಸಿದ್ಧಿ ಪಡೆದರು.

ಮೈಸೂರು ಯಕ್ಷಗಾನ ಕಲಾ ಪ್ರತಿಷ್ಠಾನ ಭಾಗವತರೆ ಆರಂಭಿಸಿ, ಅನಂತರ ಅವರ ಶಿಷ್ಯರು ಕಲಿಸಲು ಹೋಗುತ್ತಿದ್ದರು. ಇಲ್ಲಿ ಹಲವು ವರ್ಷಗಳ ತನಕ ವರ್ಷಕ್ಕೊಂದು ಪ್ರದರ್ಶನ ನೀಡುವ ಪದ್ಧತಿ ಇತ್ತು.

ಸೋಮನಳ್ಳಿಯಲ್ಲಿ ಹಿಮ್ಮೇಳದ ತರಗತಿಗಳು ನಡೆಯುತ್ತಿದ್ದವು. ಹವ್ಯಾಸಿ ಭಾಗವತರಾಗಿ, ಮೃದಂಗಕಾರರಾಗಿ ಇಲ್ಲಿನ ಶಿಷ್ಯರು ಮುಂದುವರಿದಿದ್ದಾರೆ.

ಸಾಗರದ ವನಶ್ರೀಯಲ್ಲಿ ನಾಲ್ಕು ವರ್ಷ ಕ್ಲಾಸ್ ನಡೆದು ಯಕ್ಷತೋರಣ ಎಂಬ ಹೆಸರಿನಲ್ಲಿ ಪ್ರದರ್ಶನಗಳು ನಡೆದವು.

ತಲವಾಟದಲ್ಲಿ ಹೆಜ್ಜೆ–ಗೆಜ್ಜೆ ಎಂಬ ಹೆಸರಿನಲ್ಲಿ ಜ್ವಾಲಾ ಪ್ರತಾಪ ಧ್ರುವ ಚರಿತ್ರೆ ಪ್ರಸಂಗಗಳ ಪ್ರದರ್ಶನ ನಡೆದಿದೆ. ಈ ತಂಡದ ದಿವ್ಯಾ ಪ್ರಸಂಗ ಬರೆದಿದ್ದಾಳೆ.

ಬೆಳೆಯೂರಿನವರು ಚನ್ನಮಾಜೀ ಪ್ರಸಂಗವನ್ನು ಭಾಗವತರ ನಿರ್ದೇಶನದಲ್ಲಿ ಪ್ರದರ್ಶಿಸಿದ್ದಾರೆ.

ಗಾಜನೂರಿನಲ್ಲಿ ಗೋವರ್ಧನಗಿರಿ ಪೂಜೆ, ಕಂಸ ವಧೆ ಕಾರ್ಯಕ್ರಮಗಳನ್ನು ತಯಾರು ಮಾಡಿಕೊಟ್ಟಿದ್ದಾರೆ.

ಪುರಪ್ಪೆಮನೆ ಸಾಕೇತ ಕಲಾವಿದರು ಒಂದೇ ಮನೆಯ ಏಳು ಜನ ಸೋದರರು ಭಾಗವತರ ನಿರ್ದೇಶನದಲ್ಲಿ ಭಾಸವತಿ ಮುಂತಾದ ಆಖ್ಯಾನಗಳನ್ನು ಪ್ರದರ್ಶಿಸಿದ್ದಾರೆ.

ತಾಳಗುಪ್ಪಾ ಮಲೆನಾಡು ಯಕ್ಷಗಾನ ಪ್ರತಿಷ್ಠಾನ ಇಲ್ಲಿ ಬಯಲಾಟಗಳಲ್ಲಿ ಮೊದಲೆ ಪಳಗಿದ ತರುಣರು ಇದ್ದರು. ಇವರಿಗೆ ತಾಳ ಲಯ ಸೂತ್ರಗಳೊಂದಿಗೆ ಕಲಿಸುವುದು ಕಷ್ಟವಾಯಿತು ಆದರೆ ಅಲ್ಲಿಯ ಶಾಲಾ ವಿದ್ಯಾರ್ಥಿಗಳಿಗೆ ತರಗತಿ ಮಾಡಿದಾಗ ಅವರು ಉತ್ಸಾಹದಿಂದ ಕಲಿತು ಗೋವರ್ಧನ ಪೂಜೆ, ಅಭಿಮನ್ಯು ಕಾಳಗ ಆಖ್ಯಾನಗಳನ್ನು ಕಲಿತು ಪ್ರದರ್ಶಿಸಿದರು.

ಉಡುಪಿಯ ಯಕ್ಷ ಮಂಡಳ ತಂಡದವರು ಕಲ್ಕತ್ತಾದಲ್ಲಿ ಪ್ರದರ್ಶನ ನೀಡಿ ಬಂದಿದ್ದಾರೆ.

ಭಾಗವತರು ಬರೆದ 'ನಿಸರ್ಗ ಸಂಧಾನ'ದ ಪ್ರಯೋಗ ಸೋಂದಾ ಮಂಡಳಿಯಿಂದ ನಡೆದಾಗ ಪರಿಸರ ರಕ್ಷಣೆಯ ಅದರ ಸಂದೇಶವನ್ನು ಕಂಡು ಮೆಚ್ಚಿ ಡಾ॥ ಮಾಧವ ಗಾಡ್ಗೀಳರು ದೇಶದಾದ್ಯಂತ ಈ ಯಕ್ಷಗಾನದ ಪ್ರಯೋಗಗಳಾಗಬೇಕೆಂದು ಆಶಿಸಿ ಸರ್ಕಾರದಿಂದ ಯೋಜನೆಯಾಗಿ ಅದು ಬರುವಂತೆ ಮಾಡಿ ಸಂಸ್ಕೃತದಲ್ಲಿ ಪದ್ಯಗಳು ಹಿಂದಿಯಲ್ಲಿ ಅರ್ಥ ಹೀಗೆ ಮೊದಲ ವರ್ಷ ಕರ್ನಾಟಕದಲ್ಲಿ ಹನ್ನೆರಡು ಕಾರ್ಯಕ್ರಮಗಳು, ಎರಡನೇ ವರ್ಷ ಮಹಾರಾಷ್ಟ್ರ ಕೇರಳ ಗೋವಾ ಇಪ್ಪತ್ತು ಕಾರ್ಯಕ್ರಮಗಳು, ಮೂರನೇ ವರ್ಷ ಕರ್ನಾಟಕದ ಕೆಲಭಾಗ, ಗೋವಾದ ಕೆಲಭಾಗ ಹೀಗೆ ಹದಿನೆಂಟು ಆಟಗಳು ಪ್ರಯೋಗವಾಗಿವೆ.

ಬರಹದ ಬೀದಿಯಲ್ಲಿ:-

ಯಕ್ಷಗಾನ ಪ್ರಸಂಗಗಳ ಬರವಣಿಗೆಯಲ್ಲಿ ಹೊಸ್ತೋಟ ಅವರದ್ದು ಸರ್ವ ಪ್ರಥಮ ಸ್ಥಾನ. ಈವರೆಗೆ ಬೇರೆಯಾರೂ ರಚಿಸಿರದಷ್ಟು ಸಂಖ್ಯೆಯಲ್ಲಿ ಪ್ರಸಂಗಗಳನ್ನು ರಚಿಸಿದ್ದಾರೆ. ಈವರೆಗೆ ಇನ್ನೂರರ ಸಮೀಪದ ಪ್ರಸಂಗಗಳು ರಚನೆಯಾಗಿವೆ. ಪರಿಮಾಣದಲ್ಲಿ, ಸಂಖ್ಯೆಯಲ್ಲಿ ಮಾತ್ರವಲ್ಲದೇ ರಂಗದ ಮೇಲಿನ ಪರಿಣಾಮದಲ್ಲೂ ಇವರ ಪ್ರಸಂಗಗಳು ಅತ್ಯುತ್ತಮವಾಗಿರುವುದನ್ನು ಕಲಾವಿದರು, ಭಾಗವತರುಗಳು, ವೃತ್ತಿಮೇಳದವರು ಎಲ್ಲರೂ ಗುರುತಿಸಿದ್ದಾರೆ.

ಇವರು ಚಿಕ್ಕ ವಯಸ್ಸಿನಿಂದಲೇ ಪ್ರಸಂಗಗಳನ್ನು ಬರೆಯತೊಡಗಿದ್ದರು. ನಹುಷವಿಜಯ ಇವರ ಮೊದಲ ಪ್ರಸಂಗ. ಶಿರಸಿಯ ದಸರಾ ಉತ್ಸವ ಸಮಿತಿಯವರು ಯಕ್ಷಗಾನ ಹಸ್ತ ಪತಿ ಸ್ಪರ್ಧೆಗೆ ಕರೆದಾಗ ಪಾಂಡುರಾಜವಿಯೋಗ ಕೃತಿ ಬರೆದರು. ಅನಂತರ ಸತ್ಯಪಾಲ ಚರಿತ್ರೆ ಎಂಬ ಆಖ್ಯಾನ ರಚಿತವಾಯಿತು. ಈ ಮೂರು ಪ್ರಸಂಗಗಳ ಹಸ್ತ ಪ್ರತಿಗಳು ಕಳೆದು ಹೋದರೂ ಆ ಕೃತಿಗಳ ಕುರಿತು ಹಿರಿಯರು ನೀಡಿದ ಸಲಹೆ ಸೂಚನೆ ಮಾರ್ಗದರ್ಶನಗಳು ಅವರ ಮುಂದಿನ ರಚನೆಗಳಿಗೆ ಸ್ಫೂರ್ತಿಯಾದವು. ನಂತರ ಪಿ.ಟಿ. ಹೆಗಡೆ, ಶೀಗೇಹಳ್ಳಿಯವರ ಕೋರಿಕೆಯಂತೆ ಶಿರಸಿಯ ಬೇರಡವೇಷದ ಕಥೆಯನ್ನು ಯಶೋಮತಿ ಕಲ್ಯಾಣವೆಂಬ ಪ್ರಸಂಗವಾಗಿ ಬರೆದರು. ಧಾರವಾಡ ಆಕಾಶವಾಣಿಗಾಗಿ ಇವರು ಬರೆದ ರಾಯನಿರ್ಯಾಣ ಪ್ರಸಂಗ ರಂಗ ಹಾಗೂ ತಾಳ ಮದ್ದಲೆಗಳೆರಡರಲ್ಲೂ ಅತ್ಯಂತ ಜನಪ್ರಿಯ ವ್ಯಾಖ್ಯಾನವಾಗಿ ಹೆಸರುಗಳಿಸಿತು. ಕೆರೆಮನೆ ಮೇಳದ ಶಂಭು ಹೆಗಡೆಯವರು ರಂಗದ ಮೇಲೆ ಇದನ್ನಾಡಿ ರಾಮನ ಪಾತ್ರವಹಿಸಿ ಇವರು ಯಕ್ಷರಂಗದ ರಾಮ ಎಂದು ಜನ ಗುರುತಿಸುವಷ್ಟು ಜನಪ್ರಿಯತೆ ಪಡೆದರು. ತಾಳಮದ್ದಲೆಗೂ ಸಹ ಹೊಂದುವ ಪ್ರಸಂಗವಿದು.

ಬಂಗಾಲಿ, ಹಿಂದಿ, ಕನ್ನಡ ಭಾಷೆಗಳ ಹೊಸ ಕಾಲದ ಕಾದಂಬರಿಗಳ ಅಧ್ಯಯನ ಪರಿಣಾಮವಾಗಿ ಇವರು ಸಾಹಿತ್ಯ ಲೋಕದಲ್ಲಿ ಉಪೇಕ್ಷಿತವಾದ ಪಾತ್ರಗಳತ್ತ ಇವರು ದೃಷ್ಟಿ ಹರಿಸಿದರು. ಇವರ ಶ್ರೇಷ್ಠಮಟ್ಟದ ರಂಗ ಪ್ರಜ್ಞೆ ಹಾಗೂ ರಂಗ ನಿರ್ದೇಶನ ಪ್ರಜ್ಞೆ ಇವರ ಪ್ರಸಂಗಗಳಲ್ಲಿ ಒಳ್ಳೆಯ ಪರಿಣಾಮ

ನೀಡಿವೆ. ಇವರ ಪ್ರಸಂಗಗಳು ಕೇವಲ ಕಪಿಕರ್ಮವಾಗಿರದೆ ನಾಟಕೀಯತೆ, ಉತ್ತಮ ಪಾತ್ರ ನಿರ್ಮಾಣ-ಕ್ಷಮತೆಗಳಿಂದಾಗಿ ಆಟ ಹಾಗೂ ಕೂಟಗಳಲ್ಲಿ ಅತ್ಯಂತ ಪರಿಣಾಮಕಾರಿ ಎನಿಸುತ್ತವೆ.

ಯಕ್ಷಗಾನದ ಮಟ್ಟುಗಳು ಹಾಗೂ ತಾಳಗಳ ಮೇಲೆ ಒಳ್ಳೆಯ ಹಿಡಿತವಿರುವುದರಿಂದ ಪಾತ್ರೋಚಿತವಾದ ಸನ್ನಿವೇಶೋಚಿತವಾದ ಪದ್ಯಗಳು ಅಗತ್ಯ ಮಿತಿಯ ಸಂಖ್ಯೆಯಲ್ಲಿ ರಚಿತಗೊಂಡಿರುವುದರಿಂದ ಈ ಹೊಸ ಕಾಲದ ಪ್ರಯೋಗಗಳಿಗೆ ಅವು ಚೆನ್ನಾಗಿ ಹೊಂದಿಕೊಳ್ಳುವಂತಿವೆ. ಇಂದಿನ ದಿನಮಾನದಲ್ಲಿ ಹಳ್ಳಿಗಳಲ್ಲೇ ಇರಲಿ ಪಟ್ಟಣಗಳಲ್ಲೇ ಇರಲಿ ಆಟ ಹಾಗೂ ಕೂಟ (ತಾಳಮದ್ದಳೆ) ಗಳ ಕಾಲಮಿತಿಯ ಪ್ರಯೋಗಗಳನ್ನೇ ಜನ ಅಪೇಕ್ಷಿಸುತ್ತಾರೆಯೇ ವಿನಹ ಬೆಳತನಕದ ಪ್ರಯೋಗಗಳನ್ನಲ್ಲ. ಹಾಗಾಗಿ ಮೂರು ಅಥವಾ ನಾಲ್ಕು ಗಂಟೆಗಳ ಪ್ರಯೋಗಕ್ಕೆ ಹೊಂದಿಕೊಳ್ಳುವಂತೆ ನಲವತ್ತರಿಂದ ಅರವತ್ತು-ಎಪ್ಪತ್ತು ಪದ್ಯಗಳ ಪ್ರಸಂಗಗಳನ್ನೇ ಇವರು ಪ್ರತ್ಯೇಕಿಸಿ ರಚಿಸಿರುತ್ತಾರೆ. ಹಾಗಾಗಿ ಪ್ರಯೋಗಿಸುವವರಿಗೆ ಪ್ರಸಂಗ ಸಂಪಾದನೆಯ ಜವಾಬ್ದಾರಿ ಕಡಿಮೆಯಾಗಿರುತ್ತದೆ. ಇವರ ಪ್ರಸಂಗಗಳಲ್ಲಿ ಕಥೆಯ ಜಟಕ್ಕಿಂತ ಪಾತ್ರಕಲ್ಪನೆಗೆ, ಪಾತ್ರಗಳ ಒಳತೋಟಿಯನ್ನು ಬಿಂಬಿಸುವುದಕ್ಕೆ, ಮಾನವೀಯ ಸಂಬಂಧಗಳ ಉದ್ಘಾಟನೆಗೆ, ಹೆಚ್ಚು ಒತ್ತು ನೀಡಲಾಗಿರುತ್ತದೆ. ಹಾಗಾಗಿ ಇತರರ ಪ್ರಸಂಗಗಳಿಗಿಂತ ಹೊಸ್ತೋಟದವರ ಪ್ರಸಂಗಗಳನ್ನು ಪ್ರಯೋಗಕಾರರು ವಿಶ್ವಾಸದಿಂದ ಕೈಗೆತ್ತಿಕೊಳ್ಳುತ್ತಾರೆ. ಇವರು ಬರೆದ ಆಖ್ಯಾನಗಳ ವಸ್ತು ವಿಷಯಗಳ ಹರಹು ತುಂಬಾ ವಿಸ್ತಾರವಾದದ್ದು. ರಾಮಾಯಣ, ಮಹಾಭಾರತ, ಭಾಗವತ ಇತರ ನಾಟಕಗಳು, ಪುರಾಣ, ಇತಿಹಾಸ, ಕನ್ನಡ, ಸಂಸ್ಕೃತ, ಇಂಗ್ಲೀಷ್ ಮಹಾ ಕಾವ್ಯಗಳು, ಶೇಕ್ಸ್‌ಪಿಯರ್, ಪರಿಸರ ಸಂಬಂಧಿ ಕಥೆಗಳು, ಜನಪದ ಕಥೆಗಳು ಮುಂತಾಗಿ.

ಕೃತಿ ನಿರ್ಮಾಣದಲ್ಲಿ ಕಥೆಯ ಚೌಕಟ್ಟಿನ ಒಳಗೆ ಸಮಕಾಲೀನತೆಯ ಪ್ರಭಾವ ವ್ಯಾಪಿಸಿರುತ್ತದೆ. ಕೆಲವು ಪುರಾತನ ಆಚಾರ ವಿಚಾರಗಳು ಅಮಾನವೀಯವೆನ್ನಿಸಿದಾಗ ಅದನ್ನು ಪರಿವರ್ತಿಸಿ ಹೊಂದಿಸುವಲ್ಲಿ ಇವರ ಸೃಜನಶೀಲತೆ ಚೆನ್ನಾಗಿ ಕೆಲಸ ಮಾಡಿರುತ್ತದೆ. "ಅವಶ್ಯವಿದ್ದುದನ್ನು ಲೇಶಮಾತ್ರವೂ

ಬಿಡದೇ ಅನಾವಶ್ಯವಾದುದನ್ನು ವಿಸ್ತರಿಸದೇ ಮೂಡಿಬಂದ ಈ ಪ್ರಸಂಗಗಳು ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ದಾರಿದೀಪಗಳಂತೆ ಮಿನುಗುತ್ತವೆ" ಎಂದಿದ್ದಾರೆ ಪೆರ್ಲ ಕೃಷ್ಣ ಭಟ್.

ಯಕ್ಷಮಾರ್ಗದ ನಿರಂತರಪಥಿಕರಾಗಿರುವ ಹೊಸ್ತೋಟದವರು ಸದಾ ಈ ಕಲೆಯ ಕುರಿತು ಚಿಂತಿಸುತ್ತಾ ಮಾತನಾಡುತ್ತಿರುತ್ತಾರೆ. ಹಾಗಿರುವಲ್ಲಿ ಅವರ ತಲೆಯಲ್ಲಿ ತುಂಬಿರುವ ವಿಚಾರಗಳನ್ನು ಅವರ ಕವಿ ಹೃದಯದಲ್ಲಿ ಉದ್ಭವಿಸುವ ಪ್ರಸಂಗ ಕಾವ್ಯದ ಅಂಶಗಳನ್ನೂ ದಾಖಲಿಸಲು ಸಮಯಾವಕಾಶ ಹೇಗೆ? ಎಂಬ ಪ್ರಶ್ನೆ ಕಾಡುತ್ತದೆ. ಆದರೆ ಒಮ್ಮೆ ಸನ್ಯಾಸಿ ದೀಕ್ಷೆಗೆ ಒಳಗಾಗಿರುವ ಇವರು ಸನ್ಯಾಸದ ಆಚರಣೆಗಳನ್ನೆಲ್ಲ ಯಕ್ಷಗಾನ ಸಾಧನೆಗೆ ಬಳಸಿಕೊಂಡಿದ್ದಾರೆ. ಅಂತೆಯೇ ಪ್ರತಿ ಶ್ರಾವಣ ತಿಂಗಳನ್ನೂ ಮೌನವಾಗಿ ಕಳೆಯುವ ವ್ರತವನ್ನು ಮೊದಲಿನಿಂದಲೂ ಆಚರಿಸಿಕೊಂಡು ಬಂದಿರುತ್ತಾರೆ. 'ಮೌನ' ಕೇವಲ ಮಾತನಾಡದಿರುವುದಕ್ಕಾಗಿಯೇ ಅಲ್ಲ, ಮೌನವಾಗಿದ್ದು ಬರವಣಿಗೆಯಲ್ಲಿ ತೊಡಗಿಕೊಳ್ಳುವುದಕ್ಕಾಗಿ. ಯಕ್ಷಗಾನದ ಕುರಿತು, ಪ್ರಸಂಗಗಳ ಕುರಿತು ವರ್ಷವಿಡೀ ತಲೆತುಂಬುವ ಆಲೋಚನೆಗಳನ್ನೆಲ್ಲ ಶ್ರಾವಣದ ಮೌನಕಾಲದಲ್ಲಿ ಕೃತಿರೂಪಕ್ಕೆ ಇಳಿಸುತ್ತಿದ್ದರು. ಸುಮಾರು ನಲವತ್ತೆರಡು ವರ್ಷಗಳಿಂದ ಈ ಮೌನಾಚರಣೆ ನಡೆದುಕೊಂಡು ಬಂದಿದೆ. ಈಚೆಗೆ ರಾಮಾಯಣದ ಭಾಗವತದ ಪ್ರಸಂಗಗಳನ್ನೂ ಬರೆಯುವ ಸಂದರ್ಭದಲ್ಲಿ ಮೌನದ ಅವಧಿಯನ್ನು ಹಿಗ್ಗಿಸಿ ಒಂದು ತಿಂಗಳಿದ್ದಿದ್ದನ್ನು ಮೂರು ತಿಂಗಳು ಮಾಡಿಕೊಂಡು ಅವುಗಳನ್ನು ಪೂರೈಸಿದ್ದಾರೆ.

ಸುಮಾರು ಎರಡು ಶತಕಗಳಿಗೆ ಸನಿಹದಷ್ಟು ಪ್ರಸಂಗಗಳು, ಇಪ್ಪತ್ತಮೂರು ಸಾವಿರ ದ್ವಿಪದಿಗಳ ರಾಮಕೃಷ್ಣ ಮಹಿಮೆ, ತಾಳಸೂತ್ರ ಕೃತಿ, ಯಕ್ಷಗಾನ ಲಕ್ಷಣ ಗ್ರಂಥ, "ಯಕ್ಷ ಹಸ್ತ ಪ್ರತಿಗಳು ವಿಕಾಸದ ಹಿನ್ನೆಲೆಯಲ್ಲಿ", ಯಕ್ಷಗಾನ ಕಲಿಕೆಗೊಂದು ಪಠ್ಯಕ್ರಮ ಮುಂತಾದ ಕೃತಿ ರಾಶಿಗಳು ಆಕೃತಿ ಪಡೆದಿವೆ. ಅದಕ್ಕಿಂತ ಹೆಚ್ಚಾಗಿ ತನ್ನನ್ನು ತಾನು ಅರಿಯುವುದಕ್ಕೆ ತನ್ನೊಳಗನ್ನು ತಾನು ಪರಿಷ್ಕರಿಸಿಕೊಳ್ಳುವುದಕ್ಕೆ ತನ್ನ ನಡತೆಯನ್ನು ತಾನು ತಿದ್ದಿಕೊಳ್ಳಲು ಪ್ರಯತ್ನಿಸುವುದಕ್ಕೆ ಈ 'ಮೌನ' ತುಂಬಾ ನೆರವಾಗಿದೆಯೆಂಬುದು ಭಾಗವತರ ಹೇಳಿಕೆ.

ಭಾಗವತರ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳ ಪಟ್ಟಿ ಹೀಗಿದೆ:-

ಶ್ರೀರಾಮ ಮಹಿಮೆ

ರಾಮಾಯಣದ ಹತ್ತೊಂಬತ್ತು ಪ್ರಸಂಗಗಳು 1994 ರಲ್ಲಿ ಮುದ್ರಿತ. 1) ಪುತ್ರಕಾಮೇಷ್ಠಿ, 2) ಸೀತಾ ಪರಿಣಯ, 3) ಪಟ್ಟಾಭಿಷೇಕ ಭಂಗ, 4) ಪಾದುಕಾ ಪ್ರದಾನ, 5) ಪಂಚವಟಿ, 6) ಸೀತಾಪಹಾರ, 7) ವಾಲಿವಧೆ, 8) ಲಂಕಾದಹನ, 9) ಸೇತುಬಂಧನ, 10) ಅಂಗದ ಸಂಧಾನ, 11) ನಾಗಾಸ್ತ್ರ ಪ್ರಯೋಗ, 12) ಕುಂಭಕರ್ಣ ಕಾಳಗ, 13) ಅತಿಕಾಯ ಕಾಳಗ, 14) ಕಾಲನೇಮಿ ಕಾಳಗ, 15) ಇಂದ್ರಜಿತು ಕಾಳಗ, 16) ರಾವಣ ವಧೆ, 17) ಅಗ್ನಿ ಪರೀಕ್ಷೆ ಅಯೋಧ್ಯಾಗಮನ, 18) ಸೀತಾ ಪರಿತ್ಯಾಗ, 19) ಶ್ರೀರಾಮ ನಿರ್ಯಾಣ.

ಶ್ರೀಕೃಷ್ಣ ಮಹಿಮೆ:-

1) ಶ್ರೀ ಕೃಷ್ಣ ಜನ್ಮ, 2) ಗಿರಿಪೂಜೆ, 3) ಕಾಳಿಂದೀ ವಿವಾಹ, 4) ಗೋಪೀಗೀತ, 5) ಅಕ್ರೂರ ರಾಯಭಾರ, 6) ಕಂಸವಧೆ, 7) ಗುರುಕುಲ ವಾಸ, 8) ಕಾಲಯಮನ ಸಂಹಾರ, 9) ರುಕ್ಮಿಣೀ ಹರಣ, 10) ಜರಾಸಂಧ ವಧೆ, 11) ಭೌಮಾಸುರ ಕಾಳಗ, 12) ಸುವರ್ಣ ಸುಪರ್ಣ, 13) ಶಿಶುಪಾಲ ಶಿರಚ್ಛೇದ, 14) ಶ್ಯಮಂತಕ ವಿಲಾಸ, 15) ಜಾಂಬವತೀ ಕಲ್ಯಾಣ, 16) ಲಕ್ಷಣಾ ಸ್ವಯಂವರ, 17) ಪ್ರದ್ಯುಮ್ನ ವಿಜಯ, 18) ಉಷಾ ಪರಿಣಯ, 19) ಗಾಂಧಾರೀಶಾಪ, 20) ಕೃಷ್ಣ ನಿರ್ಯಾಣ.

ಮಹಾಭಾರತದ ಪ್ರಸಂಗಗಳು (ಅಮುದ್ರಿತ)

1) ಉರಗಾದ್ವರ, 2) ಕುರುಕುಲೋದಯ, 3) ಪಾಪನಾಶಿನಿ, 4) ಭೀಷ್ಮ ಪ್ರತಿಜ್ಞೆ, 5) ಭೀಷ್ಮ ವಿಜಯ, 6) ಸತ್ಯವತೀ ಸಂತಾನ, 7) ವಿವಾಹ ಮಂಗಳ, 8) ಪಾಂಡುರಾಜಾವಸಾನ, 9) ವಿಷಪ್ರಾಶನ, 10) ಗುರುದ್ರೋಣ, 11) ಕವಚಾಪಹರಣ, 12) ವಿದ್ಯಾಪರೀಕ್ಷೆ, 13) ಗುರುದಕ್ಷಿಣೆ, 14) ಲಾಕ್ಷಾ ಗೃಹದರ್ಶನ, 15) ಭೀಮಸಾಹಸ, 16) ದ್ರೌಪದೀಸ್ವಯಂವರ, 17) ಕಳಿಂಗ ಕನ್ಯೆ, 18) ತೀರ್ಥಯಾತ್ರೆ, 19) ಸುಭದ್ರಾಪಹರಣ, 20) ಖಾಂಡವದಹನ, 21) ಜರಾಸಂಧ ವಧೆ, 22) ಅಗ್ರ ಪೂಜೆ, 23) ದ್ಯೂತದುರಂತ, 24)

ಅಕ್ಷಯ ಪಾತ್ರೆ, 25) ಶಬರ ಶಂಕರ, 26) ಸೌಗಂಧಿಕಾ ಪುಷ್ಪ, 27) ಊರ್ವಶೀ ಶಾಪ, 28) ಘೋಷಯಾತ್ರೆ, 29) ಪ್ರಾಯೋಪ್ರವೇಶ, 30) ಜಯದ್ರಥ ಗರ್ವಭಂಗ, 31) ಯಕ್ಷಪ್ರಶ್ನೆ, 32) ಕೀಚಕ ವಧೆ, 33) ಉತ್ತರಗೋಗ್ರಹಣ, 34) ಪಾರ್ಥಸಾರಥಿ, 35) ಕೃಷ್ಣ ಸಂಧಾನ, 36) ಸಮರಸನ್ನಾಹ, 37) ಭೀಷ್ಮ ಪರ್ವ, 38) ಅಭಿಮನ್ಯು ಕಾಳಗ, 39) ಸೈಂಧವ ವಧೆ, 40) ದ್ರೋಣ ವಧೆ, 41) ಶಲ್ಯ ಸಾರಥ್ಯ, 42) ಕರ್ಣ ಪರ್ವ, 43) ಶಲ್ಯ ಪರ್ವ, 44) ಗದಾಪರ್ವ, 45) ಕೋಪತಾಪಶಾಪ, 46) ಜ್ವಾಲಾ ಪ್ರತಾಪ, 47) ಸುಧನ್ವ ಕಾಳಗ, 48) ಬಬ್ರುವಾಹನ ಕಾಳಗ, 49) ವೀರವರ್ಮ ವಿಜಯ, 50) ಸ್ವರ್ಗಾರೋಹಣ.

ಇತರ ಪ್ರಸಂಗಗಳು:

1) ಅಕ್ಕಮಹಾದೇವಿ (ಅರ್ಥಸಹಿತ), 2) ಅಕ್ಷರ ವಿಜಯ, 3) ಅವಿಕ್ಷಿತ ವಿಜಯ (ಅರ್ಥಸಹಿತ), 4) ಅಶ್ವಮೇಧ, 5) ಅಶ್ವಮೇಧ ಜ್ವಾಲೆ (ಅರ್ಥಸಹಿತ), 6) ಆಮ್ರಪಾಲಿ, 7) ಏಕಲವ್ಯ (ಅರ್ಥಸಹಿತ), 8) ಕಾಂತಿಮತಿ ಪರಿಣಯ, 9) ಕಾಳಿಂಗ ಮರ್ದನ (ಅರ್ಥಸಹಿತ), 10) ಗಿರಿಜಾ ಕಲ್ಯಾಣ (ಅರ್ಥಸಹಿತ), 11) ಗೀತಾನುಸಂಧಾನ, 12) ಗುಣಘಣ ಕಲ್ಯಾಣ, 13) ಚಂಡ ಮಹಾಸೇನ, 14) ಚಂಡಶಾಸನ ಚರಿತ್ರೆ, 15) ಚಿತ್ರಪಟ ರಾಮಾಯಣ (ಅರ್ಥಸಹಿತ), 16) ಚಿತ್ರಾಂಗದಾ (ಅರ್ಥಸಹಿತ), 17) ಜಾಂಬವತಿ ಕಲ್ಯಾಣ (ಅರ್ಥಸಹಿತ), 18) ಜೀಮೂತವಾಹನ (ಅರ್ಥಸಹಿತ), 19) ತ್ಯಾಗಶೀಲೆ, 20) ತ್ರಿಯಾದ್ರಿ ವಿಜಯ ಮೂರು ಪ್ರಸಂಗಗಳು, 21) ದಯಾಮಯ ಸಿದ್ಧಾರ್ಥ (ಅರ್ಥಸಹಿತ), 22) ದ್ರೋಣ ದ್ರುಪದ (ಅರ್ಥಸಹಿತ), 23) ಧರ್ಮಗುಪ್ತ ವಿಜಯ, 24) ಧರ್ಮ ವಿಜಯ, 25) ಧ್ರುವಚರಿತ್ರೆ (ಅರ್ಥಸಹಿತ), 26) ನಹುಷ ವಿಜಯ, 27) ನಾಗಾನಂದ, 28) ನಿಸರ್ಗ ಸಂಧಾನ (ಕನ್ನಡ), 29) ನಿಸರ್ಗ ಸಂಧಾನ (ಹಿಂದಿಯಲ್ಲಿ ಅರ್ಥ ಸಹಿತ), 30) ಪಾಂಡುರಾಜ ವಿಜಯ, 31) ಪಾಂಡುರಾಜಾವಸಾನ (ಮಾರವಿಜಯ), 32) ಪ್ರತಿಜ್ಞಾ ಯೌಗಂಧರಾಯಣ (ಅರ್ಥಸಹಿತ), 33) ಬಸವೇಶ್ವರ ಚರಿತ್ರೆ (ಅರ್ಥಸಹಿತ), 34) ಭದ್ರಾಯುವಿಜಯ, 35) ಭಸ್ಮಾಸುರ ಮೋಹಿನಿ, 36) ಭಾಮಿನೀ ಪರಿಣಯ,

37) ಭಾಸವತಿ, 38) ಭೈರವಲೀಲೆ, 39) ಮಾಯಾ ಕೋಲಾಹಲ (ಅರ್ಥಸಹಿತ), 40) ಮಾರಿಕಾಂಬಾ ಮಹಾತ್ಮೆ, 41) ಮಿತ್ರಭೇದ (ಅರ್ಥಸಹಿತ), 42) ಮೂಲಕಾಸುರವಧೆ (ವೈಜಯಂತಿ ಪರಿಣಯ), 43) ಮೃತ್ಯುಮಾಂಗಲ್ಯ, 44) ಮೇಘ ಕೇತ (ಮ್ಯಾಕ್‌ಜಿತ್), 45) ಮೇಘದೂತ, 46) ಯಕ್ಷರಕ್ಷಣೆ (ಅರ್ಥಸಹಿತ), 47) ಯಶೋಮತಿ ಕಲ್ಯಾಣ, 48) ಯಾಣ ಕ್ಷೇತ್ರ ಮಹಾತ್ಮೆ, 49) ರತ್ನಾಂಗದ ದಿಗ್ವಿಜಯ (ಚರಿತ್ರೆ), 50) ರಾಜನರ್ತಕಿ, 51) ಶ್ರೀರಾಮ ಪರಂಧಾಮ, 52) ಲವ-ಕುಶ, 53) ವಸುಂಧರಾಪರಿಣಯ, 54) ವಾರಾಹಿ ವಿಲಾಪ (ಅರ್ಥಸಹಿತ), 55) ವೃಕ್ಷ ಮಹಾತ್ಮೆ, 56) ವೃಷಸೇನ, 57) ಶಕುಂತಲಾ ಪರಿಣಯ (ಶಾಕುಂತಲಾಖ್ಯಾನ), 58) ಶನಿ ಮಹಾತ್ಮೆ, 59) ಶಬರ ಶಂಕರ (ಅರ್ಥಸಹಿತ), 60) ಶಿವಾಜಿ ಚರಿತ್ರೆ (ಅರ್ಥಸಹಿತ), 61) ಶೂದ್ರ ಸಂಕಲ್ಪ, 62) ಶ್ಯಮಂತಕರತ್ನ ಪ್ರಕರಣ, 63) ಸತಿಸಾವಿತ್ರಿ, 64) ಸತೀಸೀಮಂತಿನಿ - ಸೀವಂತಿನೀ ಪರಿಣಯ ಸೋಮವಾರ ವ್ರತ ಮಹಾತ್ಮೆ, 65) ಸತ್ಯನಾರಾಯಣ ವ್ರತ ಕಥಾ, 66) ಸತ್ಯಪಾಲ ಚರಿತ್ರೆ, 67) ಸಸ್ಯ ಸಂಧಾನ (ಅರ್ಥಸಹಿತ), 68) ಸ್ವರ್ಣಕಮಲ (ಅರ್ಥಸಹಿತ), 69) ಹಂಸಾವಳಿ.

ಇವೆಲ್ಲವುಗಳ ಜೊತೆಗೆ-23 ಪ್ರಸಂಗಗಳಿಗೆ ಸೂಕ್ತ ಬದಲಾವಣೆಯೊಂದಿಗೆ ಸಂಭಾಷಣೆ ರಚಿಸಿದ್ದಾರೆ.

ಮಕ್ಕಳಿಗಾಗಿ ಸಮಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಹಲವು ಪ್ರಸಂಗಗಳಿಗೆ ಸಂಭಾಷಣೆ ರಚಿಸಿದ್ದಾರೆ.

ಪ್ರಾಥಮಿಕ ಶಾಲೆಗಳಲ್ಲಿ ಯಕ್ಷಗಾನ ಪದ್ಯಗಳನ್ನು ಅಳವಡಿಸಬೇಕು ಎಂಬ ಉದ್ದೇಶದಿಂದ ಶಾಲಾ ಮಕ್ಕಳಿಗಾಗಿ ಯಕ್ಷಪೂರ್ಣಿಮಾ ಎಂಬ ಹೆಸರಿನಿಂದ ಈ ಆಳಗಿನ ಹದಿನೈದು ಯಕ್ಷಗಾನ ಪ್ರಸಂಗಗಳನ್ನು ಅರ್ಥಸಹಿತ ಬರೆದಿದ್ದು ಅವು ಮುದ್ರಣವಾಗುತ್ತಿವೆ.

ಭಾಗವತ, ರಾಮಾಯಣ, ಮಹಾಭಾರತ, ಪಂಚತಂತ್ರ ಹಾಗೂ ಇತರ ಮೂಲಗಳನ್ನು ಆಧರಿಸಿದ 1) ಸಿದ್ಧಿ ಬುದ್ಧಿ ರಮಣ ಗಣಪತಿ, 2) ದಯಾಮಯ ಸಿದ್ಧಾರ್ಥ, 3) ಮಿತ್ರ ಬೋಧ, 4) ದೇಹ ಬಲಿದಾನ, 5)

ಕೃಷ್ಣ ಲೀಲಾಪ್ರಸಂಗ, 6) ಗುರುಕುಲವಾಸ, 7) ಯಜ್ಞರಕ್ಷಣೆ, 8) ವೃಷಸೇನ, 9) ಅಭಿಮನ್ಯು, 10) ಬಬ್ರುವಾಹನ.

ರಾಮಾಯಣ, ಮಹಾಭಾರತ, ಭಾಗವತಗಳಿಗೆ ಪ್ರಸಂಗಗಳನ್ನು ಮೂರು ವರ್ಷಗಳ ಮೌನಾಚರಣೆಯ ಸಂದರ್ಭದಲ್ಲಿ ಪೂರ್ತಿಗೊಳಿಸುವುದರ ಕುರಿತು ಪ್ರೊ. ಎಂ.ಎ.ಹೆಗಡೆಯವರು ಭಾಗವತರ ಷಷ್ಠ್ಯಬ್ಧಿ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

"ಹೀಗೆ ಒಬ್ಬನೇ ಕವಿಯು ಹಟತೊಟ್ಟು ಈ ಮೂರು ಮಹಾಕೃತಿಗಳನ್ನು ಯಕ್ಷಗಾನಕ್ಕೆ ಇಳಿಸಿರುವುದೊಂದು ಅಪೂರ್ವ ದಾಖಲೆಯಾಗಿದೆ".

ಶ್ರೀ ರಾಮಕೃಷ್ಣಾಶ್ರಮದ ಶ್ರೀ ಜಗದಾತ್ಮಾನಂದಜೀವರ ಕೋರಿಕೆಯಂತೆ ಬಂಗಾಲಿಯಲ್ಲಿ ಲುಂಥೀ ಎಂಬವರು ಬರೆದಿದ್ದ ಶ್ರೀ ರಾಮಕೃಷ್ಣ ಮಹಿಮೆ ಎಂಬ ಕೃತಿಯನ್ನು ಕನ್ನಡ ಭಾಷೆಯಲ್ಲಿ 23,700 ದ್ವಿಪದಿಗಳನ್ನು ರಚಿಸುವ ಮೂಲಕ ಪೂರ್ತಿಗೊಳಿಸಿದ್ದಾರೆ.

ಸಾಕೇತ ಕಲಾವಿದರು ಪುರಪ್ಪೆಮನೆ ಹಾಗೂ ಶಾಲ್ಮಲಾ ಟ್ರಸ್ಟ್ ಸೋಂದಾ ಇವರು ಸಂಯುಕ್ತವಾಗಿ ಪ್ರಕಟಿಸಿ ಹೊಸ್ತೋಟದವರ 60 ವರ್ಷದ ನೆನಪಿಗೆ ಅರ್ಪಿಸಿದ ಷಷ್ಠ್ಯಬ್ಧಿ ಕೃತಿಯಲ್ಲಿ ಭಾಗವತರು ಬದುಕಿನ ನೆನಪುಗಳನ್ನು ದಾಖಲಿಸಿದ್ದಾರೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಪ್ರೊ. ಕಾಳೆಗೌಡ ನಾಗವಾರ ಮತ್ತು ಜಿ.ವಿ. ಆನಂದಮೂರ್ತಿಯವರ ಸಂಪಾದಕತ್ವದಲ್ಲಿ ಪ್ರಕಟಿಸಿದ 'ಗರಿಗೆದರಿದ ನವಿಲು' ಗ್ರಂಥದಲ್ಲಿ ಹೊಸ್ತೋಟದವರ ಆತ್ಮಕಥೆ ಸವಿವರವಾಗಿ ದಾಖಲಾಗಿದೆ.

ಯಕ್ಷಗಾನಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ ಇವರ ಲೇಖನಗಳು ದೊಡ್ಡ ಸಂಖ್ಯೆಯಲ್ಲಿ ಬೆಳಕುಕಂಡಿವೆ.

ಯಕ್ಷಶಾಲ್ಮಲಾಃ– ಹೊಸ್ತೋಟ ಮಂಜುನಾಥ ಭಾಗವತರ ಯಕ್ಷಗಾನ ಕ್ಷೇತ್ರದ ಸೇವೆಯನ್ನು ಗುರುತಿಸಿ, ಅವರ ಅಭಿಮಾನಿಗಳು ಹಾಗೂ ಶಿಷ್ಯರು ಸೋಂದಾ ಸ್ವರ್ಣವಲ್ಲೀ ಮಠದಲ್ಲಿ ಅವರಿಗೆ ಸನ್ಮಾನ, ನಿಧಿ ಅರ್ಪಣೆಗಳನ್ನು ಮಾಡಿದ್ದಾರೆ. ಆ ನಿಧಿಯನ್ನು ಭಾಗವತರು ತಾವು ಸ್ವೀಕರಿಸದೇ ಅದನ್ನು ಯಕ್ಷಗಾನದ ಅಭಿವೃದ್ಧಿಗಾಗಿ ಬಳಸುವಂತೆ ಸೂಚಿಸಿದಾಗ ಸ್ವರ್ಣವಲ್ಲೀ ಗುರುಗಳ ಅಧ್ಯಕ್ಷತೆಯಲ್ಲಿ 'ಯಕ್ಷಶಾಲ್ಮಲಾ' ಎಂಬ ಟ್ರಸ್ಟನ್ನು ರಚಿಸಿ ಅದರವತಿಯಿಂದ ಈ ಕೆಳಗಿನಂತೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. 1) ಯಕ್ಷಗಾನದ ತರಬೇತಿ ಶಿಬಿರಗಳು. 2) ಯಕ್ಷಗಾನ ಭಾಗವತಿಕೆ ಕುರಿತಾದ ಶಿಬಿರ. 3) ಪ್ರಸಂಗ ಪದ್ಯಗಳ ಮಟ್ಟುಗಳ ಕುರಿತಾದ ಶಿಬಿರ. 4) ಯಕ್ಷಗಾನ ನೃತ್ಯದ ಕುರಿತು ಶಿಬಿರ. 5) ಪಠ್ಯಪುಸ್ತಕಗಳಲ್ಲಿ ಯಕ್ಷಗಾನ ಸಾಹಿತ್ಯ ಅಳವಡಿಸುವ ಕುರಿತು ಕಾರ್ಯಗಾರ. 6) ಭಾಗವತರ ಕುರಿತು ಯಕ್ಷದರ್ಶಿ ಸ್ಮರಣ ಸಂಚಿಕೆ. 7) ಸಾಕೇತ ಕಲಾವಿದರೊಂದಿಗೆ ಸೇರಿ ಷಷ್ಟ್ಯಬ್ದಿ ಅಭಿನಂದನಾ ಗ್ರಂಥ ಪ್ರಕಟನೆ. 8) ಭಾಗವತರ ರಾಮಾಯಣ ಪ್ರಸಂಗಗಳು ಹಾಗೂ ಪಾಂಡುರಾಜಾವಸಾನ ಪ್ರಕಟಣೆ. 9) ಯಕ್ಷರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಸನ್ಮಾನಗಳು. 10) "ಯಕ್ಷಶಾಲ್ಮಲಾ" ಹವ್ಯಾಸಿ ಮೇಳವೊಂದನ್ನು ಸಂಘಟಿಸಿ ಭಾಗವತರು ಶೋಧಿಸಿದ ಸೂತ್ರಾನುಗುಣವಾಗಿ ಹತ್ತು ಪ್ರಸಂಗಗಳನ್ನು ಅಭ್ಯಸಿಸಿ ಯಕ್ಷಗಾನದ ಪರಂಪರೆ ಉಳಿಸುವುದಕ್ಕಾಗಿ ಆಸಕ್ತರು ಅಪೇಕ್ಷಿಸಿದಲ್ಲೆಲ್ಲಾ ಪ್ರದರ್ಶನಗಳನ್ನು ನೀಡಲಾಗುತ್ತಿದೆ.

ಪ್ರಶಸ್ತಿಗಳುಃ– ಹೊಸ್ತೋಟ ಮಂಜುನಾಥ ಭಾಗವತರು ಪ್ರಸಿದ್ಧಿ, ಪ್ರಚಾರ, ಪ್ರಶಸ್ತಿಗಳನ್ನು ಎಂದೂ ಬಯಸಿದವರಲ್ಲ. ಆದರೆ ಅವು ತಾವಾಗಿ ಬಂದಾಗ ಅವರ ಅಭಿಮಾನಿಗಳು ಹಿತೈಷಿಗಳು 'ಅದನ್ನು ಸ್ವೀಕರಿಸುವುದರಿಂದ ಯಕ್ಷಗಾನದ ಅಭಿವೃದ್ಧಿಗೆ ಒಳಿತಾಗುವುದೆಂದು' ಒತ್ತಾಯಿಸಿ, ಅದನ್ನು ಸ್ವೀಕರಿಸುವಂತೆ ಮಾಡಿದ್ದಾರೆ. ಅವರಿಗೆ ಈ ಕೆಳಗಿನ ಪ್ರಶಸ್ತಿಗಳು ಸಂದಿವೆ.

1) ಕರ್ನಾಟಕ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ

2) ಕಪಿ ಪರಮದೇವ ಪ್ರಶಸ್ತಿ 2007.

3) ಆಳ್ವಾಸ್ ನುಡಿ ಸಿರಿ ಪ್ರಶಸ್ತಿ 2008.

ಇವಲ್ಲದೆ ಉತ್ತರ ಕನ್ನಡದ ಒಬ್ಬ ಉತ್ತಮ ಅರ್ಥಧಾರಿಯಾಗಿ, ಚುಟುಕು ಹಾಗೂ ಚುರುಕಾದ, ಧ್ವನಿ ಪೂರ್ಣವಾದ ಅರ್ಥ ಹಾಗೂ ಸಂಭಾಷಣೆಗೆ ಹೆಸರುವಾಸಿಯಾಗಿದ್ದಾರೆ.

ಕರಾವಳಿ ಯಕ್ಷಗಾನದ ಈ ಪ್ರಕಾರದಲ್ಲಿ ಅದು ಪ್ರಾದೇಶಿಕ ಭೇದಗಳಿಲ್ಲದೆ ಏಕ ಸೂತ್ರತೆಯಲ್ಲಿ ಮುಂದುವರೆಯಬೇಕು. ಯಕ್ಷಗಾನ ವೇಷ ಪ್ರಧಾನವಾಗದೆ, ಪಾತ್ರ ಪ್ರಧಾನವಾಗಿ ವೇಷ, ನೃತ್ಯ, ಅಭಿನಯ, ವಾಚಿಕಗಳೆಲ್ಲವೂ ಪಾತ್ರಭಾವವನ್ನು ಪ್ರದರ್ಶಿಸಲು ಬಳಕೆಯಾಗಬೇಕು ಎಂಬ ಮಹದಾಶೆಯೊಂದಿಗೆ ದುಡಿಯುತ್ತಿರುವ ಯಕ್ಷಋಷಿ ಇವರು.

ಹೀಗೆ ಯಕ್ಷಗಾನದ ಸರ್ವ ಅಂಗಗಳನ್ನು ಶೋಧಿಸಿ, ಕಲಿಕೆಯ ಸೂತ್ರ ರೂಪಿಸಿ 60ಕ್ಕಿಂತ ಹೆಚ್ಚು ತರಬೇತಿ ಕೇಂದ್ರಗಳನ್ನ ನಡೆಸಿ, ಈ ತನಕ ಯಾರೂ ರಚಿಸಿರದಷ್ಟು ಪ್ರಸಂಗಗಳನ್ನು ರಚಿಸಿ (200ಕ್ಕೆ ಸಮೀಪ), ರಾಜ್ಯ ಮೂಲೆ–ಮೂಲೆಗಳಲ್ಲಿ ತಿರುಗಿ ತಾಡ ಓಲೆ ಪ್ರತಿಗಳ ಅಧ್ಯಯನ ಮಾಡಿ, ಕೃತಿ ರಚಿಸಿ, ಅಂಧರಿಗೆ, ಬುದ್ಧಿಮಾಂದ್ಯರಿಗೆ ಸಹ ಯಕ್ಷಗಾನ ಕಲಿಸಿ ನಿಜವಾದ ಅರ್ಥದಲ್ಲಿ ಯಕ್ಷಗಾನದ ಹೊಸತೋಟದ ಕೃಷಿಕರು ಇವರಾಗಿದ್ದಾರೆ.

* * *

ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನ ಶೈಲಿಯ ಬಗೆಗೆ ಚಿಂತಿಸಿ, ಲಯ ಸಾಕ್ಷಾತ್ಕಾರ ಮಾಡಿಕೊಂಡು, ಸ್ಪಷ್ಟವಾದ ಸೂತ್ರ ನಿರೂಪಿಸಿ ರೂಢಿಗೆ ತಂದರು. ಯಕ್ಷಗಾನದ ಸಪ್ತತಾಳಗಳನ್ನು ನಿರ್ದಿಷ್ಟಪಡಿಸಿ ಕುಣಿತದ ರೂಪಗಳನ್ನು ರೂಪಿಸಿದರು. ನಾಲ್ಕು ಬಗೆಯ ಲಯಗಳನ್ನು ಗ್ರಹಿಸಿ, ತಾಳ ಲಯ ಮಟ್ಟು ಕುಣಿತಗಳ ಖಚಿತ ಜ್ಞಾನದಿಂದ ವಸ್ತುನಿಷ್ಠತೆಗೆ ಆದ್ಯತೆ ನೀಡಿದರು. ಹದಿನೆಂಟು ರಾಗಸಾಹಿತ್ಯದ ಬಗ್ಗೆ ಪ್ರಭುತ್ವ ಪಡೆದರು. ಪ್ರಾದೇಶಿಕ ಭೇದ ತೊಡೆದುಹಾಕಲು ಪ್ರಯತ್ನಿಸಿದರು. ಹಲವು ಗ್ರಂಥ ರಚನೆಯಿಂದ ಹೆಸರಾದರು. ಅಂಧ ಮಕ್ಕಳಿಗೂ ಯಕ್ಷಗಾನ ಕಲಿಸಿದರು. ಯಕ್ಷಗಾನ ಚಿಂತನೆ, ತರಬೇತಿ, ಪ್ರಯೋಗ, ಪ್ರಸಂಗ, ಗ್ರಂಥರಚನೆ, ಪ್ರಾತ್ಯಕ್ಷಿಕೆ ಉಪನ್ಯಾಸಗಳಿಂದ ಯಕ್ಷ ಋಷಿ ಎನಿಸಿದರು.

ಇವರ ಪರಿಚಯವನ್ನು ಪ್ರಸ್ತುತ ಗ್ರಂಥದಲ್ಲಿ ನಿರೂಪಿಸಿದೆ.

ಪ್ರೊ. ಡಿ. ಲಿಂಗಯ್ಯ

ಮುಖಪುಟ ಚಿತ್ರ : ನಿಧಿ ಪ್ರಕಾಶನ, ಸಾಗರ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು